# ಆಶಾಕಿರಣ

## ಕನ್ನಡ ಪ್ರಥಮ ಭಾಷೆ ಪಾಸಿಂಗ್ ಪ್ಯಾಕೇಜ್

10 ನೇ ತರಗತಿ

ಇದು ಸುಲಭವಾಗಿ ಉತ್ತೀರ್ಣವಾಗುವ ವಿದ್ಯಾರ್ಥಿಗಳಿಗೆ ಸಹಕಾರಿ








ರಚನೆ

ಶ್ರೀ ರಂಗನಾಥ ಎನ್ ವಾಲ್ಮೀಕಿ

ಸಹ ಶಿಕ್ಷಕರು

ಸರಕಾರಿ ಪ್ರೌಢ ಶಾಲೆ ದೇವಿಕೊಪ್ಪ

ತಾ.ಕಲಘಟಗಿ ಜಿ.ಧಾರವಾಡ

ಜಂಗಮವಾಣಿ -9945054579

# ಪರಿವಿಡಿ


| ಕ್ರ.ಸಂ | ಪ್ರಶ್ನಾಂಶಗಳು | ಪುಟ ಸಂಖ್ಯೆ |
|---|---|---|
| 1 | ಒಂದು ವಾಕ್ಯದ ಪ್ರಶ್ನೆಗಳು ಉತ್ತರ ಸಹಿತ | 3 |
| 2 | ಎರಡು ಮೂರು ವಾಕ್ಯದ ಪ್ರಶ್ನೆಗಳು ಉತ್ತರ ಸಹಿತ | 4-6 |
| 3 | ಸಂದರ್ಭ ಪ್ರಶ್ನೆಗಳ ಮಾದರಿ ಬರೆಹ | 7 |
| 4 | ಸಂದರ್ಭದ ಪ್ರಶ್ನೆಗಳಿಗೆ ಪೂರಕ | 8 |
| 5 | ಕವಿ ಪರಿಚಯ | 9 |
| 6 | ಪದ್ಯ ಕಂಠಪಾಠ | 9-10 |
| 7 | ಗದ್ಯ ಭಾಗದ ಸಂಭಾವ್ಯ ದೀರ್ಘ ಪ್ರಶ್ನೆಗಳು ಉತ್ತರ ಸಹಿತ( ನಾಲ್ಕು ಅಂಕ) | 10-11 |
| 8 | ಪದ್ಯ ಭಾಗದ ಸಂಭಾವ್ಯ ದೀರ್ಘ ಪ್ರಶ್ನೆಗಳು ಉತ್ತರ ಸಹಿತ (ನಾಲ್ಕು ಅಂಕ ) | 11-12 |
| 9 | ಪತ್ರಬರಹ | 13-14 |
| 10 | ಗಾದೆಮಾತನ್ನು ವಿಸ್ತರಿಸಿ ಬರೆಯುವುದು ( ಮೂರು ಅಂಕ ) | 15-16 |
| 11 | ಅಲಂಕಾರ ( ಮೂರು ಅಂಕ) | 17-18 |
| 12 | ಛಂದಸ್ಸು | 18-21 |
| 13 | ವ್ಯಾಕರಣಾಂಶಗಳು | 21-24 |

## 1.ಒಂದು ವಾಕ್ಯದ ಪ್ರಶ್ನೆಗಳು -ಉತ್ತರ ಸಹಿತ

**1)** ರಾಹಿಲನುಯಾರು ?

ರಾಹಿಲನು ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದ ಒಬ್ಬ ಡಾಕ್ಟರ್.

**2)** ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?

ರಾಹಿಲನು ತುರ್ತುಪರಿ ಸ್ಥಿತಿ ನಿರ್ವಹಣೆಗೆ ಬೇಕಾದ ಔಷದ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದು ಕೊಂಡನು.

**3)** ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?

ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

**4)** ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

ಧನು( ಕಬಂಧ)

**5)** ವೆಸ್ಟಮಿನಿಷ್ಟರ್ಅಬೆ-ಯಾರಸ್ಮಾರಕವಾಗಿದೆ ?

ಇದು ದಿವಂಗರಾದ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ.

**6)** ವಿಶ್ವೇಶ್ವರಯ್ಯಅವರನ್ನುದಿವಾನರನ್ನಾಗಿ ಮಾಡಿದವರು ಯಾರು ?

ವಿಶ್ವೇಶ್ವರಯ್ಯಅವರನ್ನು ದಿವಾನರನ್ನಾಗಿ ನೇಮಕ ಮಾಡಿ ದವರು ನಾಲ್ವಡಿ ಕೃಷ್ಣರಾಜ ಒಡೆಯರ್

**7)** ಮನೆಮಂಚಮ್ಮಕಥೆ ಹೇಳಿದ ಕವಿಯಾರು ?

ಮನೆಮಂಚಮ್ಮಕಥೆ ಹೇಳಿದ ಕವಿ ಸಿದ್ದಲಿಂಗಯ್ಯ

**8)** ಇಂದಲ್ಲ ನಾಳೆ ಫಲಕೊಡುವ ಅಂಶಗಳಾವುವು ?

ಭೂಮಿಗೆ ಬಿದ್ದಬೀಜ ಮತ್ತು ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲಕೊಡುವ ಅಂಶಗಳು

**9)** ಶಾನುಭೋಗರ ಬ್ರಹಾಸ್ತ್ರ ಯಾವುದು?

ಶಾನುಭೋಗರ ಬ್ರಹಾಸ್ತ್ರ ಖರ್ದಿಪುಸ್ತಕ

**10)**ದುಷ್ಟಬುದ್ದಿಯು ಧರ್ಮಬುದ್ದಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?

ದುಷ್ಟಬುದ್ದಿಯು ಧರ್ಮಬುದ್ದಿಯ ಮೇಲೆ ಕಳ್ಳತನದ ಆರೋಪ ಹೊರಿಸಿದನು.

**10)** ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?

ಸುಕುಮಾರಸ್ವಾಮಿಗೆ ಶೆಟ್ಟಿಪಟ್ಟವನ್ನು ಕಟ್ಟಲಾಯಿತು.

**12)** ನದಿಜಲಗಳು ಏನಾಗಿವು ?

ನದಿಜಲಗಳು ಕಲುಷಿತವಾಗಿವೆ.

**13)** ಕಾಡುಮೇಡುಗಳ ಸ್ಥಿತಿಹೇಗಿದೆ ?

ಕಾಡುಮೇಡುಗಳ ಸ್ಥಿತಿ ಬರಡಾಗಿವೆ.

14) ಹಕ್ಕಿಯಾರನೆತ್ತಿಯನ್ನುಕುಕ್ಕಿದೆ?

ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

**15)** ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?

ಕುಂಪಣಿ ಸರಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬಆದೇಶ ಹೊರಡಿಸಿತು.

**16)** ಕುಮಾರವ್ಯಾಸನಆರಾಧ್ಯದೈವಯಾರು ?

ಕುಮಾರವ್ಯಾಸನ ಆರಾಧ್ಯದೈವ ಗದುಗಿನ ವೀರ ನಾರಾಯಣ

**17)** ಕವಿ ನೋಡಿದ ಅಡಿಕೆಯ ತೋಟ ಎಲ್ಲಿದೆ ?

ಕವಿಯು ನೋಡಿದ ಅಡಿಕೆಯ ತೋಟ ಬನದ ಅಂಚಿನಲ್ಲಿದೆ

**18)** ಅಶ್ವಯುಜದ ಬತ್ತದಗದ್ದೆಯ ಬಣ್ಣ ಯಾವ ಹಸುರಿನಂತಿದೆ?

ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ.

**19)** ಅಂತಕಾತ್ಮಜ ಎಂದರೆ ಯಾರು ?

ಅಂತಕಾತ್ಮಜ ಎಂದರೆ ಧರ್ಮರಾಯ

**20)** ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು ?

ಕುದುರೆಯನ್ನು ಲವನು ಉತ್ತರೀಯದಿಂದ ಕಟ್ಟಿದನು.

**21)** ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು ?

ಪರಶುರಾಮನು ದ್ರೋಣನಿಗೆ ವಾರುಣ, ವಾಯವ್ಯ, ಆಗ್ನೇಯ, ಇಂದ್ರ ಮೊದಲಾದಪ್ರಧಾನಅಸ್ತ್ರಗಳನ್ನುನೀಡಿದನು.

**22)** ದಿನಪಸುತ ಎಂದರೆ ಯಾರು ?

ದಿನಪಸುತ ಎಂದರೆ ಕರ್ಣ

**23)** ಪುಟ್ಟಪೋರಿಏನುಮಾಡುತ್ತಿದ್ದಳು ?

ಪುಟ್ಟಪೋರಿಯು ಮುಸುರೆ ತಿಕ್ಕುತ್ತಿದ್ದಳು.

**24)** ಅಮ್ಮ ಎಲ್ಲಿ ಮಲಗಿದ್ದಾಳೆ ?

ಅಮ್ಮಗುಡಿಸಲಿನಲ್ಲಿ ಮಲಗಿದ್ದಾಳೆ.

**25)** ಯಾರಿಗೆ ವಸಂತ ಮುಖ ತೋರಲಿಲ್ಲ?

ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯಮಾರನಿಗೆ ವಸಂತಮುಖ ತೋರಲಿಲ್ಲ

# 2.ಎರಡು ಮೂರು ವಾಕ್ಯದ ಪ್ರಶ್ನೆಗಳು

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ ಈ ಪ್ರಶ್ನೆಗಳು ಒಟ್ಟು ಹತ್ತು ಬರುತ್ತವೆ.ಅದರಲ್ಲಿ ಗದ್ಯ ನಾಲ್ಕು ಪದ್ಯ ಎರಡು ಹಾಗೂ ಪಠ್ಯಪೋಷಕ ಪಾಠಗಳಲ್ಲಿ ನಾಲ್ಕು ಪ್ರಶ್ನೆಗಳು ಬರುತ್ತವೆ.

**1.ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?**

ಉತ್ತರ -" ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ.ಹಿಂದೆ ಅದು ವಿಕಾಸವಾಗುತ್ತಿತ್ತು.ಆಗ ಇದು ಘನೀಭೂತವಾಗಿದೆ.ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ.ಜಾತಿ ವ್ಯವಸ್ಥೆಯ ಕೌರ್ಯಕ್ಕೆ ತುತ್ತಾಗಿ ಶೂದ್ರರು,ಅಸ್ಪೃಶ್ಯರು ಸ್ವಾತಂತ್ರಹೀನರಾಗಿ ಗುಲಾಮತನ ಅನುಭವಿಸುತ್ತಿದ್ದಾರೆ"ಎಂದು ಸ್ವಾಮಿ ವಿವೇಕಾನಂದರು ಜಾತಿ ವ್ಯವಸ್ಥೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**2.ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು .ಏಕೆ ?**

ಉತ್ತರ - ಕೋಮುವಾದವು ಏಕಧರ್ಮ ಮತ್ತು ಏಕ ಸಂಸ್ಕೃತಿಯೇ ಶ್ರೇಷ್ಠವೆಂದು ನಂಬುತ್ತ ನಂಬಿಸುತ್ತಾ,ಪರಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ.ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು.

**3.ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು ?**

ಉತ್ತರ :- ವಿವೇಕಾನಂದರು ಅಮೇರಿಕಾದ ಚಿಕಾಗೋ ನಗರದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತಾ "ಸ್ವಮತಾಭಿಮಾನ,ಅನ್ಯಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತನ್ನು ಆವರಿಸಿಕೊಂಡಿರುವ ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರೆಯುತ್ತಿತ್ತು "ಎಂದು ಹೇಳಿದರು.

**4.ಜಲಿಯನ್ ವಾಲಾಬಾಗನಲ್ಲಿರುವ ಒಕ್ಕಣೆ ಏನು ?**

ಉತ್ತರ - ಜಲಿಯನ್ ವಾಲಾಬಾಗನಲ್ಲಿ "ಏಪ್ರೀಲ್ 13,1919 ರಂದು ಬ್ರೀಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ದ ಹಿಂದೂ,ಸಿಖ್,ಮುಸಲ್ಮಾನರ ಸಮ್ಮಿಳತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ " ಎಂದು ಒಕ್ಕಣೆ ಬರೆಯಲಾಗಿದೆ.

**5.ಭಗತ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ ?**

ಉತ್ತರ- ಭಗತ್ ಸಿಂಗ್ ತನ್ನ ಸಹೋದರಿಗೆ ತಾನು ಜಲಿಯನ್ ವಾಲಾಬಾಗ ಹತ್ಯಾಕಾಂಡ ನಡೆದ ಸ್ಥಳದಿಂದ ಒಂದು ಡಬ್ಬಿಯಲ್ಲಿ ಸಂಗ್ರಹಿಸಿ ತಂದಿದ್ದ ಮಣ್ಣು 'ತ್ಯಾಗದ ಪ್ರತೀಕ' ಎಂದು ತೋರಿಸುತ್ತಾನೆ ?

**6.ಶಾಪ ವಿಮೋಚನೆಯ ಫಲವೇನು ?**

ಉತ್ತರ -ಸುಂದರಿಯು ಮೃಗವನ್ನು ಮನಸಾರೆ ಒಪ್ಪಿ ಮದುವೆಯಾಗುತ್ತೇನೆ.ಎಂದು ಹೇಳಿದಾಗ ಮೃಗದ ಆಕಾರವು ಬದಲಾಗಿ ರಾಜಕುಮಾರನಾಯಿತು.ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

**7.ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ ?**

ಉತ್ತರ - ಸುಂದರಿಗೆ ಮೃಗದ ಒರಟು ಮಾತು,ತಿಕ್ಕಲು ನಡೆವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು ಹಾಗೂ ಅದರ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು.

8.ಒಗಟುಗಳಿಂದ ಶೈಕ್ಷಣಿಕ ಲಾಭ ಏನು ?

ಉತ್ತರ -ಇವುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ.ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ.ಮುದುಡಿದ ಮನಸ್ಸನ್ನು ಅರಳಿಸಲು ,ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ.ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

9. 'ಅಂಗಿ'-ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿರಿ.

ಉತ್ತರ - ಕೈಯುಂಟು ಕಾಲಿಲ್ಲ,ಶಿರ ಹರಿದ ಮುಂಡ,ಮೈಯೊಳಗೆ ನವಗಾಯ, ಒಂಬತ್ತು ತುಂಡು, ಒಯ್ಯನೊಯ್ಯನೆ ಬಂದು ಹೆಗಲೇರಿಕೊಂಡು ರಾಯರಾಯರಿಗೆಲ್ಲ ತಾನೇ ಪ್ರಚಂಡ ಎಂಬುದು ಅಂಗಿ ಎಂಬ ಉತ್ತರಕ್ಕೆ ಬರುವ ಬೆಡಗಿನ ಪ್ರಶ್ನೆಯಾಗಿದೆ.

10.ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟು ಹೇಗೆ ವಿವರಿಸುತ್ತದೆ ?

ಉತ್ತರ -ಉತ್ತರಾಣಿ ಕಡ್ಡಿಯು ದಾರಿಯು ಬದಿಯಲ್ಲಿ ಹುಟ್ಟಿ,ದಾರಿಯ ಬದಿಯಲ್ಲಿ ಬೆಳೆದು,ದಾರಿಯಲ್ಲಿ ಓಡಾಡುವವರ ಮುಂಜೆರಗನ್ನು ಹಿಡಿದು ಎಳೆದು ತೊಂದರೆಯನ್ನು ಕೊಡುತ್ತದೆ.ಗರಿಕೆಯು ಹುಲ್ಲು ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆದು,ಬೆಳೆಯ ಬೆಳವಣಿಗೆಗೆ ಅಡ್ಡಿಯಾಗಿ ರೈತನಿಗೆ ತೊಂದರೆ ಕೊಡುತ್ತದೆ.

11.ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ?

ಉತ್ತರ- ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ " ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯಲ್ಲಿ ಏನು ಸಂಭವಿಸುತ್ತದೆ ? ತಾನೀಗ ಈ ಕದವನ್ನುತಟ್ಟಿದರೆ ಪರಿಣಾಮವೇನಾಗಬಹುದು ?ಬ್ಲಾಕ್ ಔಟ್ ನಿಯಮ ಪಾಲಿಸುವ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ ?" ಎಂಬ ಪ್ರಶ್ನೆಗಳು ಮೂಡಿದವು.

12.ಪೊಯೆಟ್ಸ್ ಕಾರ್ನರ್ ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?

ಉತ್ತರ–ಲಂಡನ ನಗರದ ಪೊಯೆಟ್ಸ್ ಕಾರ್ನರನಲ್ಲಿ ಲೇಖಕ ಕ್ಲಿಪಿಂಗ್,ಹಾರ್ಡಿ,ಮೆಕಾಲೆ,ಜಾನ್ಸನ್,ಗೋಲ್ಡ್ ಸ್ಮಿತ್ ವಿಮರ್ಶಕರಾದ ಡ್ರ್ಯಾಯ್ ಡಾನ್,ನಾಟಕಕಾರ ಬೆನ್ ಜಾನ್ಸನ್ ಹಾಗೂ ರಾಷ್ಟ್ರ ಕವಿ ವರ್ಡ್ಸವರ್ತ ಮೊದಲಾದವರ ಸಮಾಧಿಗಳಿವೆ.

13.ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

ಉತ್ತರ-ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ,ಭಗವದ್ಗೀತೆಯಂಥ ಗ್ರಂಥ ಉದ್ಭವಿಸಿತೊ,ಆ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮಕ್ಕೆ ಅವಕಾಶ ಕೊಡುವುದಿಲ್ಲ.ಆದ್ದರಿಂದ ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುಗಳು ಆದರೂ ಸರಿ ಬೆನ್ನ ಹಿಂದಿನಿಂದ ಕೊಲ್ಲುವುದು ಧರ್ಮವಲ್ಲ

14.ಧರ್ಮಾದಿಕರಣರು ವಟವೃಕ್ಷಕ್ಕೆ ಏನು ಹೇಳಿದರು ?

ಉತ್ತರ–ವಟವೃಕ್ಷವೇ ನೀನು ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ ,ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ,ನೀನು ತಪ್ಪದೆ ಸಾಕ್ಷಿಯನ್ನು ನುಡಿ"- ಎಂದು ಧರ್ಮಾಧಿಕರಣರು ಹೇಳಿದರು.

15.ಸುಕುಮಾರ ಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?

ಉತ್ತರ-ಸುಕುಮಾರಸ್ವಾಮಿ ಅತ್ಯಂತ ರೂಪವಂತನಾಗಿದ್ದ. ಅವನಿಗೆ ಮೂವ್ವತ್ತೆರಡು ಲತಾ ಗೃಹಗಳಲ್ಲಿ ದೇವಲೋಕದ ಅಪ್ಸರೆಯಂತೆ ಇರುವ ಮೂವ್ವತ್ತೆರಡು ಜನ ಹೆಂಡತಿಯರು ಇದ್ದರು.ಅಲ್ಲದೇ ಅವನ ಮನರಂಜನೆಗಾಗಿ ಮೂವ್ವತ್ತೆರಡು ನೃತ್ಯಾಂಗನೆಯರು ನಾಟ್ಯವನ್ನು ಮಾಡುತ್ತಿದ್ದರು.ಅವನ ಬಳಿ ಮೂವ್ವತ್ತೆರಡು ಕೋಟಿ ಚಿನ್ನ,ಪಂಚರತ್ನಗಳು ಇದ್ದವು.ಹೀಗೆ ಈತ ಸುಖಭೋಗಗಳನ್ನು ಅನುಭವಿಸುತ್ತಿದ್ದ.

16.ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

ಉತ್ತರ-ಕ್ರಿ.ಶ 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶ ಹೊರಡಿಸಿತು. ಆದರೆ ಹಲಗಲಿ ಬೇಡರು ಆಯುಧಗಳನ್ನು ಒಪ್ಪಿಸಲಿಲ್ಲ.ಇದರ ವಿರುದ್ಧ ಹಲಗಲಿಯ ಬೇಡರು ಹೋರಾಡಿದರು.

17.ಕವಿ ಯಾವ ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?

ಉತ್ತರ- ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟುವ ಹಚ್ಚ ಹಸುರಿನಿಂದ ಕವಿಗೆ ಆಗಸವು ಹಾಗೂ ಆಗಸದಲ್ಲಿನ ಮಿಗಿಲ ಬಣ್ಣವೂ ಹಸುರಾಗಿ ಕಾಣುತ್ತದೆ.ಗದ್ದೆಯ ಬಯಲಿನಲ್ಲಿ ಸೊಂಪಾಗಿ ಬೆಳೆದ ಬತ್ತದ ಪೈರುಗಳು ಹಸುರಾಗಿ ಕಾಣುತ್ತದೆ.ಮಲೆ,ಕಣಿವೆಯಲ್ಲಿ ಬೆಳೆದ ಗಿಡಮರಗಳು ಹಸಿರಾಗಿ ಕಾಣುತ್ತವೆ.ಪ್ರಕೃತಿ ಹಚ್ಚ ಹಸುರಿನಿಂದ ಕೂಡಿರುವುದರಿಂದ ಸಂಜೆಯ ಬಿಸಿಲೂ ಸಹ ಕವಿಗೆ ಹಸುರಾಗಿ ಕಾಣುತ್ತದೆ.

18.ದ್ರುಪದನು ದ್ರೋಣನಿಗೆ ಹೇಳಿದ ಮಾತುಗಳು ಯಾವುವು ?

ಉತ್ತರ-ದ್ರುಪದನು ದ್ರೋಣನಿಗೆ "ನಿನ್ನನ್ನು ನಾನು ತಿಳಿಯೆನು,ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ?ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ?ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರಾಗುತ್ತಾರೆಯೇ? ಎಂಬ ಮಾತುಗಳಿಂದ ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು

19.ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು?ವಿವರಿಸಿ ಉತ್ತರ-ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ,ಜ್ಞಾನ ಮಾತ್ರ ಅಲ್ಲ.ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು.ಅದು ಕೇಳಿ ತಿಳಿದಿದ್ದಲ್ಲ.ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ.ಅದು ತರ್ಕವಲ್ಲ.ನಡೆಯಿಂದ ನುಡಿ ಹುಟ್ಟಿದ್ದರೆ ಅದು ಅರಿವು.

20.ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?

ಉತ್ತರ-ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ " ಭೂ ಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

## 3.ಸಂದರ್ಭದ ಪ್ರಶ್ನೆಗಳ ಮಾದರಿ ಬರಹ

### ಗದ್ಯಭಾಗ

1 ) " ಹೊತ್ತು !ಹೊತ್ತು !ಹೊತ್ತೇ ಹಣ "

ಆಯ್ಕೆ - ಈ ವಾಕ್ಯವನ್ನು ವಿ.ಕೃ ಗೋಕಾಕ ಅವರು ರಚಿಸಿರುವ ಸಮುದ್ರದಾಚೆಯಿಂದ ಎಂಬ ಪ್ರವಾಸ ಕಥನದಿಂದ ಆಯ್ದ 'ಲಂಡನ್ ನಗರ ' ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ -ಲೇಖಕರು ಲಂಡನ್ ನಗರದಲ್ಲಿ ಲಕ್ಷಾನುಲಕ್ಷ ಜನರು ಸದಾ ಅವಸರದಿಂದ ಓಡಾಡುತ್ತಿರುವುದನ್ನು ಕಂಡ ಸಂದರ್ಭದಲ್ಲಿ "ವಿಲಾಯಿತಿಯ ಜನರಿಗೆ ಸಮಯವೇ ಹಣ: ಸಮಯವನ್ನು ವ್ಯರ್ಥಮಾಡದೇ ಸದಾ ಕಾರ್ಯಪ್ರವೃತ್ತರಾಗಿರುತ್ತಾರೆ" ಎಂದು ಹೇಳುತ್ತಾರೆ.

ಸ್ವಾರಸ್ಯ - ವಿದೇಶದ ಜನರು ತಮ್ಮ ಸಮಯವನ್ನು ವ್ಯರ್ಥ ಮಾಡದೇ ದುಡಿದು ಹಣ ಗಳಿಸುವ ಧಾವಂತದಲ್ಲಿ ಇರುತ್ತಾರೆ ಎಂಬುದು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

2) "ನಾನು ಮುಖ ಮೇಲಾಗಿ ಬಿದ್ದಿದ್ದೆನೇ" ?

ಆಯ್ಕೆ -ಈ ವಾಕ್ಯವನ್ನು ಶ್ರೀ ಎ.ಎನ್ ಮೂರ್ತಿರಾಯರು ಬರೆದ "ಸಮಗ್ರ ಲಲಿತ ಪ್ರಬಂಧಗಳು" ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಆಯ್ಕೆ – ಈ ವಾಕ್ಯವನ್ನು ಎ.ಎನ್.ಮೂರ್ತಿರಾಯರ "ಸಮಗ್ರ ಲಲಿತ ಪ್ರಬಂಧಗಳು" ಕೃತಿಯಿಂದಾಯ್ದ ವ್ಯಾಘ್ರಗೀತೆ ಎಂಬ ಪಾಠದಿಂದ ಆರಿಸಲಾಗಿದೆ.

ಸಸಂದರ್ಭ –ಶಾನುಭೋಗರು ಹುಲಿಯ ಆಕ್ರಮಣದಿಂದ ಹೆದರಿ,ಮರ ಹತ್ತಲು ಓಡುವಾಗ ಕಲ್ಲನ್ನು ಎಡವಿ ಬಿದ್ದು,ಪ್ರಜ್ಞೆ ತಪ್ಪಿದಾಗ,ಅದೇ ದಾರಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ-"ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ ?"ಎಂಬ ಸಮಸ್ಯಗೆ ಶಾನುಭೋಗರು ಈ ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದು ಇಲ್ಲಿಯ ಸ್ವಾರಸ್ಯವಾಗಿದೆ.

### ಪದ್ಯಭಾಗ

1) "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

ಆಯ್ಕೆ- ಈ ವಾಕ್ಯವನ್ನು ಡಾ.ಬಿ.ಎಸ್ ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು'ಕೃತಿಯಿಂದ ಆಯ್ದ 'ಹಲಗಲಿಯ ಬೇಡರು'ಎಂಬ ಲಾವಣಿಯಿಂದ ಆರಿಸಲಾಗಿದೆ

ಸಂದರ್ಭ–ಬ್ರಿಟಿಷ್ ಸರಕಾರ ಕ್ರಿ.ಶ 1857 ರ ಪ್ರಥಮ ಸಂಗ್ರಾಮ ನಂತರ ಸರಕಾರದ" ಅನುಮತಿಯಿಲ್ಲದೇ ಯಾರೂ ಆಯುಧಗಳನ್ನು ಬಳಸುವಂತಿಲ್ಲ .ಹಾಗೆ ಈಗಾಗಲೇ ತಮ್ಮ ಬಳಿಯಿರುವ ಆಯುಧಗಳನ್ನು ಸರಕಾರಕ್ಕೆ ತಂದು ಒಪ್ಪಿಸಬೇಕು" ಎಂಬ ಆದೇಶವನ್ನು ಜಾರಿಗೆ ತಂದ ಸಂದರ್ಭದಲ್ಲಿ ಈ ಮಾತು ಬರುತ್ತದೆ

ಸ್ವಾರಸ್ಯ : ಬ್ರಿಟಿಷ್ ಕಂಪನಿ ಸರಕಾರದ ಆದೇಶ ಹಾಗೂ ಭಾರತೀಯರ ಮೇಲೆ ಬ್ರಿಟಿಷರ್ ದಬ್ಬಾಳಿಕೆಯು ಈ ಮಾತಿನಲ್ಲ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ

2) " ಹಸುರಾದುದು ಕವಿಯಾತ್ಮ"

ಆಯ್ಕೆ–ಈ ವಾಕ್ಯವನ್ನು 'ಕುವೆಂಪು' ಅವರು ರಚಿಸಿದ 'ಪಕ್ಷಿಕಾಶಿ' ಕವನ ಸಂಕಲದಿಂದ ಆಯ್ದ 'ಹಸುರು 'ಪದ್ಯ ಭಾಗದಿಂದ ಆಯ್ದು ಕೊಳ್ಳಲಾಗಿದೆ.

ಸಂದರ್ಭ–ಕುವೆಂಪು ಅವರು ಕುಪ್ಪಳ್ಳಿಯ ಕವಿ ಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು,ಆನಂದದಿಂದಸವಿದ ಪ್ರಕೃತಿಯ ಹಚ್ಚ ಹಸುರಿನ ಸೌಂದರ್ಯದ ವರ್ಣನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ -ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಹಚ್ಚ ಹಸುರಿನ ನೋಟ ಕವಿಯ ಆತ್ಮವನ್ನು ಹಸುರಾಗಿಸಿ / ಶಾಂತವಾಗಿಸಿ ಆನಂದಾನುಭೂತಿಯನ್ನು ಅನುಭವಿಸುತ್ತಿತ್ತು ಎಂಬುದನ್ನು ಈ ನುಡಿ ಭಾವಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ

## 4. ಸಂದರ್ಭದ ಪ್ರಶ್ನೆಗಳಿಗೆ ಪೂರಕ

ಗದ್ಯ ಹಾಗೂ ಪದ್ಯ ಭಾಗದಿಂದ ತಲಾ ಎರಡು ಸಂದರ್ಭದೊಡನೆ ವಿವರಿಸಿ ಪ್ರಶ್ನೆಗಳು ಬರುತ್ತವೆ.ಸಂದರ್ಭ ಬರೆಯುವಾಗ ಆಯ್ಕೆಗೆ ಒಂದು ಅಂಕ ನಿಗದಿಯಾಗಿರುತ್ತದೆ.ಹೀಗಾಗಿ ಪ್ರತಿ ಗದ್ಯ-ಪದ್ಯದ ಕವಿಯ ಹೆಸರು ಹಾಗೂ ಆಕರ ಕೃತಿ ತಿಳಿದುಕೊಂಡರೆ ಸುಲಭವಾಗಿ ನಾಲ್ಕು ಅಂಕ ಪಡೆಯಬಹುದು(ತಲಾ ಒಂದು ಅಂಕ). ಆ ಕುರಿತು ಸಂಕ್ಷಿಪ್ತ ವಿವರ

| ಗದ್ಯ-ಪದ್ಯದ ಹೆಸರು | ಲೇಖಕರ/ಕವಿಗಳ ಹೆಸರು | ಆಕರ ಕೃತಿಯ ಹೆಸರು |
|---|---|---|
| ಯುದ್ಧ | ಸಾರಾ ಅಬೂಬಕ್ಕರ್ | ಚಪ್ಪಲಿಗಳು ಕಥಾ ಸಂಕಲನ |
| ಶಬರಿ | ಪು.ತಿ ನರಸಿಂಹಚಾರ್ | ಶ್ರೀರಂಗ-ನಾ.ಕಸ್ತೂರಿ ಸಂಪಾದಿಸಿದ ಏಕಾಂಕ ನಾಟಕ |
| ಲಂಡನ್ ನಗರ | ವಿ.ಕೃ ಗೋಕಾಕ್ | ಸಮುದ್ರದಾಚೆಯಿಂದ ಪ್ರವಾಸ ಕಥನ |
| ಭಾಗ್ಯ ಶಿಲ್ಪಿಗಳು | ಡಿ.ಎಸ್ ಜಯಪ್ಪಗೌಡ | ಸರ್.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು |
| ಎದೆಗೆ ಬಿದ್ದ ಅಕ್ಷರ | ದೇವನೂರ ಮಹಾದೇವ | ವೈಚಾರಿಕ ಬಿಡಿ ಲೇಖನಗಳು |
| ವ್ಯಾಘ್ರ ಗೀತೆ | ಎ.ಎನ್ ಮೂರ್ತಿರಾಯರು | ಸಮಗ್ರ ಲಲಿತ ಪ್ರಬಂಧಗಳು |
| ವೃಕ್ಷಸಾಕ್ಷಿ | ದುರ್ಗಸಿಂಹ | ಕರ್ನಾಟಕ ಪಂಚತಂತ್ರಂ |
| ಸುಕುಮಾರ ಸ್ವಾಮಿ ಕಥೆ | ಶಿವಕೋಟ್ಯಾಚಾರ್ಯ | ವಡ್ಡಾರಾಧನೆ |
| ಸಂಕಲ್ಪ ಗೀತೆ | ಜಿ.ಎಸ್ ಶಿವರುದ್ರಪ್ಪ | ಎದೆ ತುಂಬಿ ಹಾಡಿದೆನು ಕವನ ಸಂಕಲನ |
| ಹಕ್ಕಿಹಾರುತಿದೆ ನೋಡಿದಿರಾ | ದ.ರಾ ಬೇಂದ್ರೆ | ಗರಿ ಕವನ ಸಂಕಲನ |
| ಹಲಗಲಿಯ ಬೇಡರು | ಜನಪದ ಲಾವಣಿ | ಡಾ.ಬಿ.ಎಸ್ ಗದ್ದಗಿಮಠ ಸಂಪಾದಿಸಿರುವ ಕನ್ನಡ ಜನಪದ ಗೀತೆ |
| ಕೌರವೇಂದ್ರನೇ ಕೊಂದೆ ನೀನು | ಕುಮಾರವ್ಯಾಸ | ಕರ್ನಾಟಕ ಭಾರತ ಕಥಾಮಂಜರಿ ಕೃತಿಯ ಉದ್ಯೋಗ ಪರ್ವ |
| ಹಸುರು | ಕುವೆಂಪು | ಪಕ್ಷಿ ಕಾಶಿ ಕವನ ಸಂಕಲನ |
| ಛಲಮೆನೆ ಮೆರೆವೆಂ | ರನ್ನ | ಸಾಹಸ ಭೀಮ ವಿಜಯ |
| ವೀರಲವ | ಲಕ್ಷ್ಮೀಶ | ದೇವುಡು ನರಸಿಂಹಶಾಸ್ತ್ರೀ ಹಾಗೂ ಶಿವಮೂರ್ತಿಶಾಸ್ತ್ರೀ ಅವರು ಸಂಪಾದಿಸಿದ ಜೈಮಿನಿ ಭಾರತ ಕೃತಿಯಿಂದ |
| ಕೆಮ್ಮನೆ ಮೀಸೆವೊತ್ತನೇ | ಪಂಪ | ಡಿ.ಎಲ್ ನರಸಿಂಹಚಾರ್ಯ ಸಂಪಾದಿಸಿದ ವಿಕ್ರಮಾರ್ಜುನ ವಿಜಯ |

## 5. ಕವಿ ಪರಿಚಯ

ಕವಿ ಪರಿಚಯ ಕಡ್ಡಾಯ ಪ್ರಶ್ನೆಯಾಗಿದೆ. ಇದು ಮೂರು ಅಂಕದ ಪ್ರಶ್ನೆಯಾಗಿದ್ದು.ಗದ್ಯ ಭಾಗದಲ್ಲಿ ಒಂದು ಹಾಗೂ ಪದ್ಯ ಭಾಗದಲ್ಲಿ ಒಂದು ಕವಿ ಪರಿಚಯ ಕಡ್ಡಾಯವಾಗಿ ಬರಲಿದ್ದು.ಅವೆರಡರಲ್ಲಿ ಒಂದು ಹಳೆಗನ್ನಡ ಕವಿ ಪರಿಚಯ ಬರುತ್ತದೆ.ಈ ಕಾರಣ ಹಳೆಗನ್ನಡ ಕವಿಗಳ ಪರಿಚಯ ಸಂಕ್ಷೀಪ್ತವಾಗಿ ಇಂತಿದೆ.

| ಅ.ನಂ | ಕವಿ ಹೆಸರು | ಕಾಲ | ಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿ / ಬಿರುದುಗಳು |
|---|---|---|---|---|---|
| 01 | ದುರ್ಗಸಿಂಹ | ಕ್ರಿ.ಶ 1031 | ಕಿಸುಕಾಡಿನ ಸಯ್ಯಡಿ | ಕರ್ನಾಟಕ ಪಂಚತಂತ್ರ | |
| 02 | ಶಿವಕೋಟ್ಯಾಚಾರ್ಯ | 10 ನೇ ಶತಮಾನ | ಬಳ್ಳಾರಿ ಜಿಲ್ಲೆಯ ಕೋಗಳಿನಾಡು | ವಡ್ಡಾರಾಧನೆ | |
| 03 | ಕುಮಾರವ್ಯಾಸ | ಕ್ರಿ.ಶ 1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ನಾಟಕ ಭಾರತ ಕಥಾಮಂಜರಿ ಐರಾವತ | ರೂಪಕಸಾಮ್ರಜ್ಯ ಚಕ್ರವರ್ತಿ |
| 04 | ರನ್ನ | ಕ್ರಿ.ಶ 949 | ಬಾಗಲಕೋಟ ಜಿಲ್ಲೆಯ ಮುಧೋಳ | ಸಾಹಸಭೀಮ ವಿಜಯ,<br>ಅಜಿತ ತೀರ್ಥಂಕರ ಪುರಾಣ ತಿಲಕಂ<br>ಪರಶುರಾಮ ಚರಿತೆ<br>ಚಕ್ರೇಶ್ವರ ಚರಿತೆ | ಕವಿಚಕ್ರವರ್ತಿ<br>ಮತ್ತು<br>ರತ್ನತ್ರಯ |
| 05 | ಲಕ್ಷ್ಮೀಶ | ಕ್ರಿ.ಶ 1550 | ಚಿಕ್ಕಮಂಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರು | ಜೈಮಿನಿ ಭಾರತ | ಉಪಮಾಲೋಲ,<br>ಕರ್ನಾಟ ಕವಿ ಚೂತವನ ಚೈತ್ರ |
| 6 | ಪಂಪ | ಕ್ರಿ.ಶ 941 | ವೆಂಗಿಮಂಡಲದ ವೆಂಗಿಪಳು | ವಿಕ್ರಮಾರ್ಜುನ ವಿಜಯ<br>ಆದಿಪುರಾಣ | ಸರಸ್ವತಿ ಮಣಿಹಾರ,<br>ಸಂಸಾರ ಸಾರೋದಯ,<br>ಕವಿತಾ ಗುಣಾರ್ಣವ |

## 6.ಪದ್ಯ ಕಂಠಪಾಠ

ಹತ್ತನೇಯ ತರಗತಿಯಲ್ಲಿ ನಾಲ್ಕು ಪದ್ಯಗಳಿಗೆ ನಾಲ್ಕು ಅಂಕ ನಿಗದಿಯಾಗಿದ್ದು ಅದೇ ಪದ್ಯದಿಂದ ಕಂಠಪಾಠ ಬರುತ್ತದೆ.ಹಕ್ಕಿ ಹಾರುತ್ತಿದೆ ನೋಡಿದಿರಾ,ಸಂಕಲ್ಪಗೀತೆ,ಕೌರವೇಂದ್ರನೇ ಕೊಂದೆ ನೀನು ಹಾಗೂ ಛಲಮೆನೆ ಮೆರೆವೆಂ- ಈ ಪದ್ಯಗಳಲ್ಲಿ ಕಂಠಪಾಠ ಬರುತ್ತದೆ..ಇದು ನಾಲ್ಕು ಅಂಕದ ಕಡ್ಡಾಯ ಪ್ರಶ್ನೆ. ಈ ನಾಲ್ಕು ಪದ್ಯಗಳಲ್ಲಿ ತಲಾ ಎರಡು ಪದ್ಯ ಭಾಗ ಕಂಠಪಾಠಕ್ಕೆ ಇದ್ದರೂ ಪರೀಕ್ಷೆಯಲ್ಲಿ ಒಂದೇ ಪದ್ಯದ ಎರಡು ಭಾಗ ಕೇಳುವದರಿಂದ ಈ ನಾಲ್ಕು ಪದ್ಯಗಳಲ್ಲಿ ತಲಾ ಒಂದು ಪದ್ಯ ಕಂಠಪಾಠ ಮಾಡಿದರೂ ಸಾಕು.

**ಸಂಕಲ್ಪ ಗೀತೆ**

ಕಲುಷೀತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡು ಮೇಡುಗಳ
ವಸಂತವಾಗುತ ಮುಟ್ಟೋಣ

**ಛಲಮನೆ ಮೆರೆವೆಂ**

ನೆಲಕಿರೆವೆನೆಂದು ಬಗೆದಿರೆ|
ಚಲಕಿರೆವೆಂ ಪಾಂಡುಸುತರೊಳೀನೆಲವಿದು ಪಾ||
ಳ್ನಲನೆನಗೆ ದಿನಪಸುತನಂ|
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ||

ಕೌರವೇಂದ್ರನ ಕೊಂದೆ ನೀನು

ಮಾರಿಗೌತಣವಾಯ್ತು ನಾಳಿನ

ಭಾರತವು ಚತುರಂಗ ಬಲದಲಿ

ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು

ತೀರಿಸಿಯೆ ಪತಿಯವಸರಕ್ಕೆ ಶ

ರೀರವನು ನೂಕುವೆನು ನಿನ್ನಯ

ವೀರರೈವರ ನೋಯಿಸೆನು ರಾಜೀವಸಖನಾಣೆ

ಹಕ್ಕಿ ಹಾರುತಿದೆ ನೋಡಿದಿರಾ

ನೀಲ ಮೇಘಮಂಡಲ-ಸಮ ಬಣ್ಣ

ಮುಗಿಲಿಗೆ ರೆಕ್ಕೆಗಳೊಡೆದವೋ ಅಣ್ಣಾ

ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು

ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ

ಹಕ್ಕಿ ಹಾರುತಿದೆ ನೋಡದೊರಾ?

## 7. ಗದ್ಯ ಭಾಗದ ಸಂಭಾವ್ಯ ದೀರ್ಘ ಪ್ರಶ್ನೆಗಳು ಉತ್ತರ ಸಹಿತ( ನಾಲ್ಕು ಅಂಕ)

**1) ಶಬರಿಯ ಸಡಗರ,ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?**

ಉತ್ತರ- ರಾಮನು ಬಂದು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು.ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ,ಪಾದಕ್ಕೆ ನಮಸ್ಕರಿಸಿ,ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು.ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು.'ಸಿದ್ದತೆಯೇ ಇಲ್ಲವಲ್ಲ ! ಎಂದು ಹಂಬಲಿಸಿದಳು.ಮನಸ್ಸಿನ ಬಯಕೆಯಂತೆ ಬಗೆ ಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು.ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತಾ ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು.ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು.ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು.ಹೀಗೆ ಶಬರಿಯ ಸಡಗರ,ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

**2) ' ನಂಬಿ ಕೆಟ್ಟವರಿಲ್ಲ ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?**

ಉತ್ತರ- ಶಬರಿ ಮಾತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ.ಸಿದ್ದರಾದ ಮಾತಂಗ ಋಷಿಗಳು ಶಬರಿಯ ಮನದಾಶೆಯನ್ನು ತಿಳಿದವರಾಗಿದ್ದು,"ರಾಮಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ.ನಿನ್ನಿಷ್ಟಾರ್ಥ ನೆರವೇರುತ್ತದೆ" ಎಂದಿದ್ದರು.ಅವರ ಮಾತಿನಂತೆ ಮತಂಗಾ ಆಶ್ರಮಕ್ಕೆ ರಾಮಲಕ್ಷ್ಮಣರು ಬರುತ್ತಾರೆ.ಶಬರಿಯು ಇವರ ದರ್ಶನದಿಂದ ಪುಳಕಿತಳಾದಳು.ಕಣ್ತುಂಬ ರಾಮನ ದರ್ಶನ ಮಾಡಿ,ಮುಟ್ಟಿ,ನಮಸ್ಕರಿಸಿ ಸಂಭ್ರಮಿಸಿದಳು.ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ.ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸಿದಳು.ಧನ್ಯಳಾದೆನೆಂದು ಸಂತಸ ವ್ಯಕ್ತಪಡಿಸಿದಳು.ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಕಾದು,ಮುನಿಗಳ ಮಾತನ್ನು ನಂಬಿ,ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಯಿತು.ಈಕೆಯ ಆಶೆ ಈಡೇರಿತು.ಹಾಗಾಗಿ "ನಂಬಿ ಕೆಟ್ಟವರಿಲ್ಲ "ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

3) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ" ಹೇಗಾಯಿತು ?

ಉತ್ತರ–ಇವರು ಕ್ರಿ.ಶ 1907 ರಲ್ಲಿ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದರು.ಇದು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸುವ ಎಲ್ಲಾ ವಿಷಯಗಳನ್ನು ವಿಮರ್ಶಿಸುವ ಅಧಿಕಾರವನ್ನು ಹೊಂದಿದೆ.ಹಾಗೆ 1923 ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ದ ಸಂಸ್ಥೆಯನ್ನಾಗಿ ಮಾಡಿದರು.ಸ್ಥಳೀಯ ಸಂಸ್ಥೆ ರಚಿಸಿ ಆಡಳಿತ ವಿಕೇಂದ್ರಿಕರಣಕ್ಕೆ ಅವಕಾಶ ಮಾಡಿಕೊಟ್ಟರು.ಇವರ ಕಾಲದಲ್ಲಿ ಗ್ರಾಮ ನೈರ್ಮಲೀಕರಣ,ವೈದ್ಯ ಸಹಾಯ,ನೀರಿ ಸೌಕರ್ಯ,ವಿದ್ಯಾಪ್ರಚಾರ ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.ಇವರು ಸಾಹಿತ್ಯ,ಸಂಗೀತ,ವಾಸ್ತುಶಿಲ್ಪಗಳ ಅಭಿವೃದ್ದಿಗೆ ಆದ್ಯತೆ ನೀಡಿದರು.ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥೆ ಪ್ರಾರಂಭಿಸಿದರು.ರೈಲು ಮಾರ್ಗಗಳ ಕಾರ್ಯ ಕೈಗೊಂಡರು.ಶಿವನಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರ ಆರಂಭಿಸಿದರು.ವಾಣಿವಿಲಾಸ ಸಾಗರ ಹಾಗೂ ಕೃಷ್ಣರಾಜ ಸಾಗರ ಆಣೆಕಟ್ಟು ಕಟ್ಟಿ ನೀರಾವರಿ ಯೋಜನೆಗೆ ಆದ್ಯತೆ ನೀಡಿದರು.ಹೀಗೆ ಇವರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯವಾಗಿ ಮಾರ್ಪಡಾಯಿತು.

4)ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಉತ್ತರ–ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು.ಕಛೇರಿಯ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಸುಧಾರಣೆ ಮಾಡಿದರು.ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು.ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರಿಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು.ರಾಜ್ಯ ಪ್ರವಾಸ ಮಾಡಿ ಅಜಮಾಷಿಸಿ ಕಾರ್ಯ ನಡೆಸಿದರು.ಸಮರ್ಥ ಕಾರ್ಯ ನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು.ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು,ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು.ಭಾಷೆ,ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದರು.ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು.ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು.

## 8. ಪದ್ಯ ಭಾಗದ ಸಂಭಾವ್ಯ ದೀರ್ಘ ಪ್ರಶ್ನೆಗಳು ಉತ್ತರ ಸಹಿತ (ನಾಲ್ಕು ಅಂಕ )

1)ಕರ್ಣನಿಗೆ ಕೃಷ್ಣನು ಒಡ್ಡಿದ ಆಮಿಷಗಳೇನು ?

ಉತ್ತರ- "ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ.ನಿನ್ನಾಣೆ ,ನೀನು ನಿಜವಾಗಿ ಈ ಭೂಮಿ ಒಡೆಯ.ಆದರೆ ನಿನಗೆ ಆ ಕುರಿತು ತಿಳಿದಿಲ್ಲ"ಎಂದು ಕೃಷ್ಣ ಕರ್ಣನ ಕಿವಿಯಲ್ಲಿ ಉಭಯವನ್ನು ಭಿತ್ತಿದನು.ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು.ಬಳಿಕ ಧರ್ಮರಾಯ,ಭೀಮಾರ್ಜುನರು ಜನಿಸಿದರು.ಹಾಗೆ ಮಾದ್ರಿಯಲಿ ಐದನೇ ಮಂತ್ರದಲಿ ನಕುಲ ಸಹದೇವ ಹುಟ್ಟಿದರು.ನಿನ್ನನ್ನು ಹಸ್ತಿನಾಪುರದ ರಾಜ ಮಾಡುವೆ.ಕೌರವರ,ಪಾಂಡವರ ಸೈನ್ಯ ನಿನ್ನ ಸೇವೆ ಮಾಡುವರು.ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇಕೆ ? ಎಡಭಾಗದಲ್ಲಿ ಕೌರವರ ಸಮೂಹ,ಬಲಭಾಗದಲ್ಲಿ ಪಾಂಡವರ ಸಮೂಹ,ಮುಂದುಗಡೆ ಮಾದ್ರ ಮಾಗಧ ಯಾದವಾದಿಗಳು,ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆಯುವುದು ಸರಿಯೇ?ದುರ್ಯೋಧನನು ನುಡಿಸಲು 'ಒಡೆಯ ಅನುಗ್ರಹವಾಗಲಿ 'ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ? ಎಂದು ಆಮಿಷ ಒಡ್ಡಿದನು.

2) ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ಉತ್ತರ- ಕೃಷ್ಣನು ಕರ್ಣನಿಗೆ ಆಮಿಷ ಒಡ್ಡಿದಾಗ ದು:ಖಿತಗೊಂಡ ಕರ್ಣ ಮನದೊಳಗೆ " ಅಯ್ಯೋ,ದುರ್ಯೋಧನನಿಗೆ ಕೇಡಾದುದು,ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೇ ;ಸುಮ್ಮನೆ ಹೋಗುವುದೆ ' ಎಂದುಕೊಂಡನು."ನಾನು ರಾಜ್ಯದ ಸಂಪತ್ತಿಗೆ ಸೋಲುವವನಲ್ಲ.ಕೌರವರು,ಪಾಂಡವರು ನನಗೆ ಸೇವೆ ಮಾಡುವುದು ಇಷ್ಟವಿಲ್ಲ.ನನ್ನ ಕಾಪಾಡಿದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆ.ಆದರೆ ನೀನು ನನ್ನ ಜನ್ಮ ರಹಸ್ಯ ಹೇಳಿ ನನ್ನೊಡೆಯನನ್ನು ಕೊಂದೆ,ದುರ್ಯೋಧನನ ಹಗೆ ನನ್ನಹಗೆ,ಆತನ ಅಭಿಮಾನವೂ ನನ್ನ ಅಭಿಮಾನ,ಆತನ ಹಾದಿಯನ್ನು ನಾನು ಪಾಲಿಸುವೆ.ಕೃಷ್ಣ ಕೇಳು ನಾಳೆ ನಡೆಯುವ ಯುದ್ದದಲ್ಲಿ ಮೃತ್ಯುದೇವತೆಗೆ ಔತಣ ಕೂಟ ಆಗುವುದು.ನಾನು ಕೌರವರ ಋಣ ತೀರಿಸುವಂತೆ ಹೋರಾಡಿ,ಯುದ್ದದಲ್ಲಿ ವೀರ ಯೋಧರನ್ನು,ನನ್ನ ಒಡೆಯನಿಗಾಗಿ ಪ್ರಾಣ ಅರ್ಪಿಸುವೆ.ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸನು "ಎಂದನು.

3)ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

ಉತ್ತರ-ದುರ್ಯೋಧನನು ಭೀಷ್ಮನಿಗೆ ಹೀಗೆ ಹೇಳುವನು.ನಾನು ನೆಲಕ್ಕಾಗಿ ಯುದ್ಧ ಮಾಡುವವನಲ್ಲ.ಛಲಕ್ಕಾಗಿ ಯುದ್ಧಮಾಡುವನು.ನನ್ನ ಗೆಳೆಯ ಕರ್ಣ ಈ ಭೂಮಿ ನನಗೆ ಪಾಳು ಭೂಮಿ ಇದ್ದಂತೆ.ನನ್ನ ತಮ್ಮ ದುಶ್ಯಾಸನ ಹಾಗೂ ಮಿತ್ರ ಕರ್ಣನನ್ನು ಕೊಂದ ಭೀಮಾರ್ಜುನರನ್ನು ಸಾಯಿಸುವವರೆಗೆ ನನಗೆ ನೆಮ್ಮದಿ ಇಲ್ಲ.ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ಪಾಂಡವರೊಡನೆ ಸಂಧಿಯನ್ನು ಮಾಡಿಕೊಳ್ಳುವದಿಲ್ಲ.ನನ್ನ ಮನದ ದು:ಖ ತೀರಿದ ಬಳಿಕ ಸಂಧಿ ಮಾತು ಎಂದನು.ನನ್ನ ನೂರು ಜನ ತಮ್ಮಂದಿರು ಯುದ್ದದಲ್ಲಿ ಸತ್ತರು.ಅವರು ಪುನ:ಹ ಬರುವುದಿಲ್ಲ.ಆದ್ದರಿಂದ ಪಾಂಡವರೊಡನೆ ಯುದ್ಧ ಮಾಡುವೆನು.ಛಲವನ್ನು ಮೆರೆಯುವೆನು.ಇಂದಿನ ಯುದ್ದದಲ್ಲಿ ಒಂದೋ ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾ ನಾನು ಭೂಮಿಗೆ ಒಡೆಯನಾಗುವೆನು,ಆದ್ದರಿಂದ ನಾನು ಯುದ್ದವನ್ನು ಮಾಡುವೆನು"ಎಂದು ಹೇಳಿದನು.

4)ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯವಾಗಿದೆ ?

ಉತ್ತರ–ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು,ಪ್ರೀತಿಯ ದೀಪವನ್ನು ಹಚ್ಚಬೇಕು.ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿರ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು.ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ದೀಕರಿಸುವ ಮುಂಗಾರಿನ ಮಳೆಯಾಗೋಣ.ಬರಡಾಗಿರುವ ಕಾಡುಮೇಡುಗಳು ಹಚ್ಚ ಹಸಿರಿನಿಂದ ಕಂಗೊಳಿಸಿ ವಸಂತಕಾಲವಾಗಬೇಕು.ಅತ್ಯಾಚಾರ,ಅನ್ಯಾಯ,ಅನೀತಿ,ಭ್ರಷ್ಟಾಚಾರ ಮುಂತಾದ ಅಸಮಾನತೆಗಳಿಂದ ಅಧ:ಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತೋಣ. ಜಾತಿ,ಮತ,ಧರ್ಮ,ಭಾಷೆಗಳ ಭೇದಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ ಸಮಾನತೆಯ ಮನೋಭಾವವನ್ನು ಮೂಡಿಸುವ ಸೇತುವೆಯಾಗಬೇಕು.ಎಲ್ಲಾ ಮತಗಳೂ ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕೋಣ.ಭಯ ಸಂಶಯದೊಳು ಕಂದಿದ ಕಣ್ಣಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತಾಗಬೇಕು.ಇವೆಲ್ಲವೂ ಆಗುವಂತೆ ದೃಢಸಂಕಲ್ಪವನ್ನು ಕೈಗೊಳ್ಳಬೇಕು" ಎಂಬುದು ಕವಿ ಜಿ.ಎಸ್ ಶಿವರುದ್ರಪ್ಪನವರ ಆಶಯವಾಗಿದೆ

# 9. ಪತ್ರಬರಹ

ಇದು ಐದು ಅಂಕದ ಕಡ್ಡಾಯ ಪ್ರಶ್ನೆಯಾಗಿದ್ದು.ವ್ಯವಹಾರಿಹ ಹಾಗೂ ಖಾಸಗಿ ಪತ್ರ ಬರಹ ಬರುವುದು.ವಿಷಯ ಬದಲಾವಣೆ ಆದರೂ ಮಾದರಿ ಒಂದೇ ಇರುವುದರಿಂದ ಇಲ್ಲಿ ವಿಳಾಸ,ಸಂಬೋಧನೆ,ವಿಷಯ,ಸ್ಥಳ,ದಿನಾಂಕ,ಸಹಿ ಇವುಗಳನ್ನು ಬರೆಯುವುದನ್ನು ರೂಢಿಸಿಕೊಂಡರು ಸಾಕು ಸುಲಭವಾಗಿ ಎರಡು-ಮೂರು ಅಂಕಗಳು ಸಿಗುತ್ತವೆ.

## ಮಾದರಿ ವ್ಯವಹಾರಿಕ ಪತ್ರ

ಇವರಿಂದ

ರಮೇಶ ಕಂಬಾರ

ಹತ್ತನೇಯ ತರಗತಿ

ಸ.ಪ್ರೌ.ಶಾಲೆ ಹಾಸನ

ಇವರಿಗೆ,

ಮುಖ್ಯೋಪಾಧ್ಯಾಯರು

ಸ.ಪ್ರೌ.ಶಾಲೆ ಹಾಸನ

ಮಾನ್ಯರೇ,

ವಿಷಯ –ಮೂರು ದಿನ ರಜೆ ಮಂಜೂರಿ ಕುರಿತು

ಈ ಮೇಲ್ಕಾಣಿಸಿದ ವಿಷಯಕ್ಕೆ ಅನ್ವಯಿಸುವಂತೆ ನಾನು ಹತ್ತನೇಯ ತರಗತಿ ವಿದ್ಯಾರ್ಥಿಯಾಗಿದ್ದು. ನಮ್ಮ ಮನೆಯಲ್ಲಿ ಅಕ್ಕನ ಮದುವೆ ಕಾರ್ಯಕ್ರಮ ಇದೆ.ಈ ಕಾರಣ ನನಗೆ ದಿನಾಂಕ 11-11-2017 ರಿಂದ 13-11-2017 ರವರಿಗೆ ಮೂರು ದಿನಗಳ ಕಾಲ ಶಾಲೆಗೆ ಬರಲು ಆಗುವುದಿಲ್ಲ.ಈ ಕಾರಣ ತಾವು ನನಗೆ ರಜೆ ಮಂಜೂರು ಮಾಡಬೇಕೆಂದು ವಿನಂತಿಸಿಕೊಳ್ಳುವೆ.

ಧನ್ಯವಾದಗಳೊಂದಿಗೆ

ಸ್ಥಳ-ಹಾಸನ ತಮ್ಮ ವಿಶ್ವಾಸಿ

ದಿನಾಂಕ:-11-11-2017

## ಖಾಸಗಿ ಪತ್ರ

ಸರಕಾರಿ ಪ್ರೌಢ ಶಾಲೆ ರಾಮನಗರದ ಸತೀಶ/ ಶ್ರೇಯಾ ಎಂದು ತಿಳಿದು ಮಂಡ್ಯದಲ್ಲಿರುವ ನಿಮ್ಮ ತಂದೆಯವರಾದ ಶ್ರೀ ಹನುಮಂತಪ್ಪ ಗೌಡರ ಇವರಿಗೆ ನಿಮ್ಮ ವಿದ್ಯಾಭ್ಯಾಸದ ಕುರಿತು ತಿಳಿಸಿ ಪತ್ರ ಬರೆಯಿರಿ.

ಇಂದ

ಶ್ರೇಯಾ

ಸರಕಾರಿ ಪ್ರೌಢ ಶಾಲೆ

ರಾಮನಗರ

ಪೂಜ್ಯ ತಂದೆಯವರಿಗೆ,

ಅಪ್ಪಾಜಿ ನಾನು ಇಲ್ಲಿ ಆರೋಗ್ಯವಾಗಿದ್ದೇನೆ.ನೀವೂ ಹೇಗಿದ್ದೀರಿ? ಮನೆಯಲ್ಲಿ ಎಲ್ಲರೂ ಕುಶಲವಾಗಿದ್ದಾರೆಯೆ ? ನನ್ನ ಅಭ್ಯಾಸ ಉತ್ತಮವಾಗಿ ನಡೆದಿದೆ.ಈಗಾಗಲೇ ನಾನು ಚಟುವಟಿಕೆ ಕಾರ್ಯಗಳನ್ನು ಪೂರ್ಣಗೊಳಿಸಿದ್ದೇನೆ ಇದಲ್ಲದೇ ರೂಪಣಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದಿರುವೆ.ವಾರ್ಷಿಕ ಪರೀಕ್ಷೆಯಲ್ಲಿ ಶೇಕಡಾ 90 ಕ್ಕಿಂತ ಹೆಚ್ಚು ಅಂಕ ಪಡೆಯುವ ಗುರಿ ಹೊಂದಿರುವೆ.ಈ ನಿಟ್ಟಿನಲ್ಲಿ ತಯಾರಿಗಾಗಿ ಪ್ರತಿ ದಿನ ಮುಂಜಾನೆ ಮೂರು ಗಂಟೆ ಹಾಗೂ ಸಂಜೆ ಮೂರು ವಿಷಯವಾರು ವೇಳಾಪಟ್ಟಿಯನ್ನು ಹಾಕಿಕೊಂಡು ಅದರಂತೆ ಅಭ್ಯಾಸ ಮಾಡುತ್ತಿರುವೆ.

ತಮ್ಮಆಶೀರ್ವಾದ ಸದಾ ನನ್ನ ಮೇಲೆ ಇರಲಿ

ತಮ್ಮ ಪ್ರೀತಿಯ ಮಗಳು

ಇವರಿಗೆ,

ಶ್ರೀ ಹನುಮಂತಪ್ಪ ಗೌಡರ

ಮಂಡ್ಯ

## 10. ಗಾದೆಮಾತನ್ನು ವಿಸ್ತರಿಸಿ ಬರೆಯುವುದು ( ಮೂರು ಅಂಕ )

ಗಾದೆ ಮಾತು ವಿಸ್ತರಣೆ ಕಡ್ಡಾಯ ಪ್ರಶ್ನೆಯಾಗಿದ್ದು.ಮೂರು ಅಂಕದ ಒಂದು ಪ್ರಶ್ನೆ ಇದಾಗಿದೆ.ಮೂರು ಗಾದೆ ಮಾತು ನೀಡಿ ಒಂದನ್ನು ವಿಸ್ತರಿಸಿ ಬರೆಯಲು ತಿಳಿಸುವರು.ಗಾದೆ ಮಹತ್ವ ಕುರಿತು ಆರಂಭದಲ್ಲಿ ಈ ಕೆಳಗಿನಂತೆ ಬರೆದರೆ ಒಂದು ಅಂಕ ಸುಲಭವಾಗಿ ದೊರೆಯುವುದು.

ಗಾದೆ ಮಾತುಗಳು ವೇದಗಳಿಗೆ ಸಮ.ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆ ಮಾತುಗಳು ಹಿರಿಯರ ಜೀವನದ ಅನುಭವದ ನುಡಿಗಳಾಗಿವೆ.ಇವು ಸಾರ್ವಕಾಲಿಕ ಸತ್ಯವಾದ ವಾಣಿಗಳಾಗಿವೆ.ಅಂಥಹ ಗಾದೆ ಮಾತುಗಳನ್ನು ಇದು ಕೂಡಾ ಒಂದಾಗಿದೆ.

### ಮಾದರಿ ಗಾದೆ ಮಾತುಗಳ ವಿಸ್ತರಣೆ ರೂಪ

**1)ಮನಸ್ಸಿದ್ದರೆ ಮಾರ್ಗ** -ವೇದ ಸುಳ್ಳಾದರೂ ಗಾದೆ ಮಾತು ಸುಳ್ಳಾಗದು.ಇವು ಹಿರಿಯರ ಅನುಭವದ ನುಡಿಗಳಾಗಿವೆ.ಅಂಥಹ ಗಾದೆಗಳಲ್ಲಿ ಇದು ಕೂಡಾ ಒಂದಾಗಿದೆ.

ಯಾವುದೇ ಸಾಧನೆಯನ್ನು ಮಾಡಬೇಕಾದರೂ ಮನಸ್ಸು ಮಾಡಬೇಕು.ಈ ಕಾರ್ಯವನ್ನು ಮಾಡಲೇಬೇಕು ಎಂದು ಪ್ರಯತ್ನ ಪಟ್ಟರೆ ಆ ಕೆಲಸ ನಮ್ಮಿಂದ ಸಾಧ್ಯವಾಗುತ್ತದೆ.ಒಂದು ಕೆಲಸವನ್ನು ಕೈಗೆತ್ತಿಕೊಂಡು ಆ ಕುರಿತು ನಮ್ಮ ಮನಸ್ಸು ಆಲೋಚಿಸಬೇಕು.ಆ ಕೆಲಸ ಸಾಧನೆ ಆಗುವರೆಗೂ ನಮ್ಮ ಪ್ರಯತ್ನ ಬಿಡಬಾರದು." ಕೈಯಲ್ಲಿ ಆಗದು ಎಂದು ಕೈ ಕಟ್ಟಿ ಕುಳಿತುಕೊಳ್ಳಬಾರದು.ವಿದ್ಯಾರ್ಥಿಗಳು ಕ್ರಮಬದ್ಧವಾಗಿ ಯೋಜನಾಬದ್ಧವಾಗಿ ಅಭ್ಯಾಸದಲ್ಲಿ ತೊಡಗಿದರೆ ಯಶಸ್ಸು ಸಾಧ್ಯ.ಯಾವುದೇ ಕೆಲಸ ಮಾಡಲು ಮುಖ್ಯವಾಗಿ ನಮಗೆ ಮನಸ್ಸು ಬೇಕು.

**2)ಕೈ ಕೆಸರಾದರೆ ಬಾಯಿ ಮೊಸರು**–ಗಾದೆ ಮಾತುಗಳು ನೋಡಲು ಕಿರಿದಾದರೂ ಹಿರಿಯ ಅರ್ಥವನ್ನು ಹೊಂದಿವೆ.ಇವು ಸಾರ್ವಕಾಲಿಕ ಸತ್ಯ ವಾಣಿಗಳಾಗಿವೆ.ಅಂಥಹ ಗಾದೆ ಮಾತುಗಳಲ್ಲಿ ಇದು ಕೂಡಾ ಒಂದಾಗಿದೆ.

ಕೈ ಕೆಸರು ಎಂದರೆ ಇದು ಕೆಲಸ,ದುಡಿಮೆಯನ್ನು ಸಂಕೇತಿಸುತ್ತದೆ.ಮೊಸರು ಎಂದರೆ ಆ ಕೆಲಸದ ಪ್ರತಿಫಲವನ್ನು ಬಿಂಬಿಸುತ್ತದೆ.ನಮ್ಮ ಬದುಕು ಸುಂದರವಾಗಬೇಕಾದರೆ ನಮ್ಮ ಕಷ್ಟ ಪಟ್ಟು ದುಡಿಮೆ ಮಾಡಬೇಕು.ಆ ನಿಸ್ವಾರ್ಥ ದುಡಿಮೆಯಿಂದ ನಮಗೆ ಹಣ.ಸಂಪತ್ತು ,ಗೌರವ ದೊರೆಯುತ್ತದೆ.ಕಷ್ಟ ಪಡದೇ ಫಲ ನಿರೀಕ್ಷೆ ಮಾಡಬಾರದು.ಕಾಯಕವೇ ಕೈಲಾಸ ಎಂಬ ವಾಣಿ ಕೂಡಾ ಇದಕ್ಕೆ ಪೂರಕವಾಗಿದೆ.

**3.ಕಟ್ಟುವುದು ಕಠಿಣ ಕೆಡುಹುವುದು ಸುಲಭ**-ಗಾದೆ ಮಾತುಗಳು ಜನಪದರ ಜೀವನದ ಅನುಭವದ ನುಡಿಗಳಾಗಿವೆ. ವೇದ ಸುಳ್ಳಾದರೂ ಗಾದೆ ಮಾತು ಸುಳ್ಳಾಗದು.ಇಂತಹ ಗಾದೆ ಮಾತುಗಳಲ್ಲಿ ಇದು ಕೂಡಾ ಒಂದಾಗಿದೆ.

ನಾವು ಯಾವುದೇ ಒಂದು ಕೆಲಸವನ್ನು ಉತ್ತಮವಾಗಿ ಮಾಡಲು ಬಹಳ ಸಮಯ ಬೇಕು.ಮಾಡಿದ ಕೆಲಸ ಕೆಡಿಸಲು ಬಹಳ ಸಮಯ ಅಗತ್ಯ ಇಲ್ಲಾ..ನಾವು ಬದುಕಿನಲ್ಲಿ ಉತ್ತಮವಾಗಿ ದುಡಿದು ಹಣ,ಗೌರವ,ಸಂಪತ್ತು ಇತ್ಯಾದಿ ಗಳಿಸಲು ಬಹಳ ದಿನಗಳೇ ಬೇಕು. ಆದರೆ ದೊರೆತ ಎಲ್ಲಾ ಆ ಗೌರವಗಳನ್ನು ಕಳೆದುಕೊಳ್ಳಲು ಸ್ವಲ್ಪ ಸಮಯ ಬೇಕು.ಕುಂಬಾರ ಒಂದು ಮಡಿಕೆ ಮಾಡಲು ಮಣ್ಣು ಹದ ಮಾಡಿ ಬಿಸಿ ಮಾಡಿ ಅದಕ್ಕೆ ಬಹಳ ಕಾರ್ಯದ ನಂತರ ಒಂದು ರೂಪ ಕೊಡುವನು.ಆದರೆ ಆ ಮಡಿಕೆ ನಾಶ ಮಾಡಲು ಒಂದು ಕ್ಷಣ ಸಾಕು.

**4.ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು-**ಗಾದೆ ಮಾತು ವೇದಗಳಿಗೆ ಸಮ.ಇವು ಹಿರಿಯರ ಜೀವನದ ಅನುಭವದ ಮಾತುಗಳಾಗಿವೆ.ಇವು ಸಾರ್ವಕಾಲಿಕ ಸತ್ಯ ವಾಣಿಗಳಾಗಿವೆ.ಅಂಥಹ ಗಾದೆ ಮಾತುಗಳಲ್ಲಿ ಇದು ಕೂಡಾ ಒಂದಾಗಿದೆ.

ಹೆತ್ತ ತಾಯಿ ನಮಗೆ ತನ್ನ ಪ್ರಾಣವನ್ನು ಪಣಕ್ಕಿಟ್ಟು ಜನ್ಮ ನೀಡಿರುತ್ತಾಳೆ.ಅಲ್ಲದೇ ನಾವು ಚಿಕ್ಕಂದನಲ್ಲಿ ತಾಯಿಗೆ ತಿಳಿಯದೇ ಎಷ್ಟೇ ತೊಂದರೆ ಕೊಟ್ಟರೂ ಮಾತೆ ತಾನು ಅದು ತೊಂದರೆ ಅಂದು ತಿಳಿದುಕೊಳ್ಳದೇ ಪ್ರೀತಿಯಿಂದ ನಮ್ಮನ್ನು ಸಲುಹುವಳು.ಅವಳ ತ್ಯಾಗ ಶ್ರೇಷ್ಟ.ಪ್ರಪಂಚದಲ್ಲಿ ತಾಯಿಗೆ ತಾಯಿಯೇ ಸಮ.

ತಾಯಿಯಂತೆ ಹೊತ್ತ ನಾಡು ಕೂಡಾ ಶ್ರೇಷ್ಟ.ಕಾರಣ ಭೂಮಿ ನಮಗೆ ಬದುಕಲು ಅವಕಾಶ ನೀಡುವುದು ಹಾಗೆ ನಮಗೆ ಪ್ರಾಕೃತಿಕವಾಗಿ ಹಲವೂ ಸೌಲಭ್ಯ ನೀಡುವುದು.ಮುಖ್ಯವಾಗಿ ತಾಯಿಯಂತೇ ಭೂಮಿ ಕೂಡ ನಮ್ಮನ್ನು ರಕ್ಷಿಸುತ್ತದೆ.ಹೀಗಾಗಿ ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

**5.ಸತ್ಯಕ್ಕೆ ಸಾವಿಲ್ಲ :ಸುಳ್ಳಿಗೆ ಸುಖವಿಲ್ಲ**–ಗಾದೆಗಳು ವೇದಗಳಿಗೆ ಸಮ.ಗಾದೆ ಸುಳ್ಳಾದರೂ ವೇದ ಸುಳ್ಳಾಗದು.ಇವು ಜೀವನದ ಹಿರಿಯರ ಅನುಭವದ ಮಾತುಗಳಾಗಿವೆ.ಅಂಥಹ ಗಾದೆ ಮಾತಗಳಲ್ಲಿ ಇದು ಕೂಡಾ ಒಂದಾಗಿದೆ..

ದೈನಂದಿನ ಬದುಕಿನಲ್ಲಿ ಮನುಷ್ಯ ಸಾಕಷ್ಟು ಮಾತು ಆಡುತ್ತಿರುತ್ತಾನೆ.ನುಡಿಯುವದನ್ನು ಇದ್ದಂತೆ ಹೇಳಿದರೆ ಅದೇ ನಿಜ.ಅದನ್ನೇ ತಿರುಚಿ ಹೇಳಿದರೆ ಸುಳ್ಳು..ಸುಳ್ಳು ಶಾಶ್ವತವಲ್ಲ ಸತ್ಯ ಶಾಶ್ವತ.ನಾವು ನಮ್ಮ ಬದುಕಿನಲ್ಲಿ ಸುಳ್ಳು ಮಾತನಾಡಬಾರದು.ಸುಳ್ಳು ಮಾತನಾಡುವುದು ನಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ತರುವುದು.ಈ ಕಾರಣ ಬೇರೆಯವರನ್ನು ಓಲೈಸು ಸಲುವಾಗಿ ಸುಳ್ಳು ಹೇಳಿದರೆ ನಾವು ಆಡಿದ್ದು ಸುಳ್ಳು ಅಂತ ತಿಳಿದರೆ ನಮಗೆ ಅಪಖ್ಯಾತಿ ತಪ್ಪಿದ್ದಲ್ಲ.ಹೀಗಾಗಿ ನಿಜ ನುಡಿಯಬೇಕು.

**6.ಮಾತೇ ಮುತ್ತು : ಮಾತೇ ಮೃತ್ಯು**–ಗಾದೆ ಮಾತು ವೇದಗಳಿಗೆ ಸಮ.ಗಾದೆ ಸುಳ್ಳಾದರೂ ವೇದ ಸುಳ್ಳಾಗದು.ಇವು ಹಿರಿಯರ ಜೀವನದ ಅನುಭವದ ನುಡಿಗಳಾಗಿವೆ.ಇಂತಹ ಮಾತುಗಳಲ್ಲಿ ಇದು ಕೂಡಾ ಒಂದಾಗಿದೆ.

ಮುತ್ತು ಆಕರ್ಷಕವಾದ ,ತುಂಬಾ ಬೆಲೆಯುಳ್ಳ ಹಾಗೂ ಮನಸ್ಸಿಗೆ ಮುದವನ್ನುಂಟು ಮಾಡುವ ವಸ್ತುವಾಗಿದೆ.ಅಂತೆಯೇ ನಮ್ಮ ಮಾತು ಕೂಡಾ ಆಕರ್ಷಕವಾಗಿಬೇಕು.ಮೌಲ್ಯಯುತವಾಗಿರಬೇಕು.ಕೆಲವೊಮ್ಮೆ ನಾವಾಡುವ ಮಾತು ಜಗಳಕ್ಕೆ ಕಾರಣವಾಗಿ ಹೊಡೆದಾಟವಾಗಿ ಸಾವಿನ ಹಂತಕ್ಕೂ ತಲುಪಬಹುದು.ಮಾತು ನಮ್ಮ ವ್ಯಕ್ತಿತ್ವವನ್ನೂ ನಿರ್ಧರಿಸುತ್ತವೆ.ಮಾತು ಬೆಳ್ಳಿ ಮೌನ ಬಂಗಾರ ಎಂಬುದು ಕೂಡಾ ಮಾತಿನ ಮಹತ್ವವನ್ನು ವಿವರಿಸುತ್ತದೆ.ಮಾತು ಆಡಿದರೆ ಹೋಯಿತು.ಮುತ್ತು ಒಡೆದರೆ ಹೋಯಿತು ಎಂಬ ನುಡಿಯು ಕೂಡಾ ಮಾತಿನ ಮಹತ್ವ ತಿಳಿಸುತ್ತದೆ.

# 11.ಅಲಂಕಾರ ( ಮೂರು ಅಂಕ)

ಅಲಂಕಾರದ ಪ್ರಶ್ನೆ ಕಡ್ಡಾಯವಾಗಿದ್ದು.ಇದು ಮೂರು ಅಂಕದ ಪ್ರಶ್ನೆ ಆಗಿದೆ.ಇಲ್ಲಿ ಉಪಮಾ ಅಲಂಕಾರ ಹಾಗೂ ರೂಪಕ ಅಲಂಕಾರ ಇವೆರಡರಲ್ಲಿ ಒಂದು ಬರುವುದು. ಉಪಮಾ ಅಲಂಕಾರದಲ್ಲಿ ವಾಚಕ ಪದ ಇರುತ್ತದೆ.ಇದನ್ನು ಗುರುತಿಸಿ ಸುಲಭವಾಗಿ ಒಂದು ಅಂಕ ಪಡೆಯಬಹುದು.

–ಅಂತೆ,ಹಾಗೆ,ವೋಲ್,ಹಂಗ,ಹಾಂಗ

ಅಲಂಕಾರಕ್ಕೆ ಕೊಟ್ಟ ವಾಕ್ಯಗಳಲ್ಲಿ ಈ ಮೇಲಿನ ವಾಚಕ ಪದಗಳು ಬಂದಿದ್ದರೆ ಅದು ಉಪಮಾಲಂಕಾರ ಎಂದು ಗುರುತಿಸಿವುದು.

ಉಪಮಾ ಅಲಂಕಾರದ ಸಂಭಾವ್ಯ ಉದಾಹರಣೆಗಳು

1."ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"

ಉಪಮೇಯ-ಗುಂಡು ಸುರಿಯುವುದು ಉಪಮಾನ-ಸಿಡಿಲು ಸಿಡಿಯುವುದು

ಉಪಮಾವಾಚಕ-ಹಾಂಗ ಸಮಾನಧರ್ಮ -ಸಿಡಿಯುವುದು

ಸಮನ್ವಯ-ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರವಾಗಿದೆ.

ಅಲಂಕಾರ -ಉಪಮಾಲಂಕಾರ

2."ಒಳಗಿನ ಮಂದಿ ಗುಂಡು ಹೊಡಿಸಿದರೂ ಮುಂಗಾರಿನ ಸಿಡಿಲು ಸಿಡಿದ್ಹಾಂಗ"

ಉಪಮೇಯ-ಒಳಗಿನ ಮಂದಿ ಗುಂಡು ಹೊಡೆಯುವುದು ಉಪಮಾನ-ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು

ಉಪಮಾವಾಚಕ–ಹಾಂಗ ಸಮಾನಧರ್ಮ- ಸ್ಪಷ್ಟವಾಗಿಲ್ಲ (ಸಿಡಿಯುವುದು)

ಸಮನ್ವಯ-ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

ಅಲಂಕಾರ - ಉಪಮಾಲಂಕಾರ

3. ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು.

ಉಪಮೇಯ-ಆಂಬರಮುಂಟೆ ನಿನ್ನದೊಂದಳವು ಉಪಮಾನ-ನೊಳವಿಂಗೆ ಕುಪ್ಪೆ ವರಂ

ಉಪಮಾವಾಚಕ-ಎಂಬವೊಲ್ ಸಮಾನಧರ್ಮ- ಸ್ಪಷ್ಟವಾಗಿಲ್ಲ

ಸಮನ್ವಯ-ಇಲ್ಲಿ ಉಪಮೇಯವಾದ ಆಂಬರಮುಂಟೆ ನಿನ್ನದೊಳವು( ದ್ರುಪದನ ಯೋಗ್ಯತೆ) ಎಂಬುದನ್ನು ಉಪಮಾನವಾದ ನೊಳವಿಂಗೆ ಕುಪ್ಪೆವರಂ ಎಂಬ ಗಾದೆಯ ಮಾತಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

ಅಲಂಕಾರ-ಉಪಮಾಲಂಕಾರ

## ರೂಪಕ ಅಲಂಕಾರ (ಸಂಭಾವ್ಯ ಪ್ರಶ್ನೆ)

1) "ಮಾರಿಗೌತಣವಾಯಿತು ನಾಳಿನ ಭಾರತವು"

ಉಪಮೇಯ-ನಾಳಿನ ಭಾರತ ಯುದ್ಧ ಉಪಮಾನ-ಮಾರಿಯ ಔತಣ

ಸಮನ್ವಯ- ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇಧವಾಗಿ ಊಹಿಸಲಾಗಿದೆ.

ಅಲಂಕಾರ- ರೂಪಕ ಅಲಂಕಾರ

ಲಕ್ಷಣ- ಇಲ್ಲಿ ಉಪಮೇಯ ಮತ್ತು ಉಪಮಾನಗಳಲ್ಲಿ ಭೇದವು ಕಂಡು ಬರದೇ ಅವೆರಡೂ ಒಂದೇ ಎಂದು ವರ್ಣಿಸಲಾಗಿದೆ.ಇದು ರೂಪಕ ಅಲಂಕಾರ.

## 12. ಛಂದಸ್ಸು

ಛಂದಸ್ಸು ಇದು ಮೂರು ಅಂಕದ ಕಡ್ಡಾಯ ಪ್ರಶ್ನೆಯಾಗಿದೆ.ಪಠ್ಯಪುಸ್ತಕದಲ್ಲಿ ಅಕ್ಷರ ಗಣ ಮತ್ತು ಮಾತ್ರಾಗಣ ಅಧ್ಯಯನಕ್ಕೆ ಇವೆ.ಮಾತ್ರಾಗಣದಲ್ಲಿ ಕಂದ,ಭಾಮಿನಿ,ವಾರ್ಧಕ ಷಟ್ಪದಿಗಳು ಬರುತ್ತವೆ.ಹಾಗೆ ಅಕ್ಷರ ಗಣಗಳಲ್ಲಿ ಖ್ಯಾತ ಕರ್ನಾಟಕ ವೃತ್ತಗಳು ಬರುತ್ತವೆ.ಕೊಟ್ಟಿರುವ ಸಾಲು ಆಧರಿಸಿ ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಿ ಸುಲಭವಾಗಿ ಒಂದು ಅಂಕ ಪಡೆಯಬಹುದು.

ಒಂದು ಸಾಲು ಪರೀಕ್ಷೆಗೆ ನೀಡಿದ್ದರೆ ಅದು ಅಕ್ಷರ ಗಣವಾಗಿದ್ದು ಖ್ಯಾತ ಕರ್ನಾಟಕ ವೃತ್ತಗಳಲ್ಲಿ ಒಂದಾಗಿರುತ್ತದೆ.

ಎರಡು ಸಾಲು ನೀಡಿದ್ದರೆ ಅದು ಕಂದ ಪದ್ಯವಾಗಿರುತ್ತದೆ.

ಮೂರು ಸಾಲು ನೀಡಿದ್ದರೆ ಅದು ಭಾಮಿನಿ ಅಥವಾ ವಾರ್ಧಕ ಷಟ್ಪದಿಯಾಗಿರುತ್ತದೆ.

### ಮಾತ್ರಾಗಣಗಳ ಮುಖ್ಯಾಂಶಗಳ ಪಟ್ಟಿ

| ಅ.ನಂ | ಛಂದಸ್ಸಿನ ಹೆಸರು | ಪದ್ಯದಲ್ಲಿರುವ ಸಾಲುಗಳ ಸಂಖ್ಯೆ | ಪರೀಕ್ಷೆಯಲ್ಲಿ ಗುರುತಿಸಲು ನೀಡುವ ಸಾಲುಗಳ ಸಂಖ್ಯೆ | ಗಣ ವಿಂಗಡಣೆ ಸ್ವರೂಪ ಪೂರ್ವಾರ್ಧ | ಪದ್ಯದಲ್ಲಿ ಒಟ್ಟು ಮಾತ್ರೆಗಳ ಸಂಖ್ಯೆ |
|---|---|---|---|---|---|
| 01 | ಕಂದ | 04 | 02 | 444<br>44444 | 64 |
| 02 | ಭಾಮಿನಿ | 06 | 03 | 3434<br>3434<br>343434- | 102 |
| 03 | ವಾರ್ಧಕ | 06 | 03 | 5555<br>5555<br>555555- | 144 |

## ಅಕ್ಷರಗಣಗಳ ಮುಖ್ಯಾಂಶಗಳ ಪಟ್ಟಿ

| ಅ.ನಂ | ಛಂದಸ್ಸಿನ ಹೆಸರು | ಸಾಲುಗಳ ಸಂಖ್ಯೆ | ಪರೀಕ್ಷೆಗೆ ನೀಡುವ ಸಾಲುಗಳು | ಪ್ರತಿ ಸಾಲಿನಲ್ಲಿರುವ ಅಕ್ಷರಗಳು | ಗಣ ವಿಂಗಡಣೆ ಸ್ವರೂಪ |
|---|---|---|---|---|---|
| 01 | ಉತ್ಪಲಮಾಲೆ | 04 | 01 | 20 | ಭರನಭಭರ ಲಗು |
| 02 | ಚಂಪಕಮಾಲೆ | 04 | 01 | 21 | ನಜಭಜಜಜರ |
| 03 | ಮತ್ತೇಭವಿಕ್ರೀಡಿತ | 04 | 01 | 21 | ಸಭರನಮಯ ಲಗು |
| 04 | ಶಾರ್ದೂಲ ವಿಕ್ರೀಡಿತ | 04 | 01 | 22 | ಮಸಜಸತತ ಗು |
| 05 | ಸ್ರಗ್ಧರಾ ವೃತ್ತ | 04 | 01 | 19 | ಮರಭನಯಯಯ |
| 06 | ಮಹಾ ಸ್ರಗ್ಧರಾವೃತ್ತ | 04 | 01 | 20 | ಸತತನಸರರ ಗು |

ಭಾಮಿನಿ ಷಟ್ಪದಿ ಸಂಭಾವ್ಯ ಪದ್ಯ

3 4 3 4 =14

| | | | |
|---|---|---|---|
| – U | – – | –U | – – |
| ಏನು | ಹೇಳ್ವೆ | ಕರ್ಣ | ಚಿತ್ತ |

3 4 3 4 =14

| | | | |
|---|---|---|---|
| – U | – U U | UUU | – – |
| ಗ್ಲಾನಿ | ಯಾವುದು | ಮನಕೆ | ಕುಂತೀ |

3 4 3 4 3 4 1ಗುರು =21+ 1ಗುರು

| | | | | | | |
|---|---|---|---|---|---|---|
| – U | UU UU | –U | – U U | – U | – UU | – |
| ಸೂನು | ಗಳ ಬೆಸ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಛಂದಸ್ಸು– ಭಾಮಿನಿ ಷಟ್ಪದಿ

5 5 5 5 =20

| | | | |
|---|---|---|---|
| – U – | – UU | UUU UU | – – U |
| ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ |

5 5 5 5 =20

| | | | |
|---|---|---|---|
| – U – | – U – | UU – U | UUU U U |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು |

5 5 5 5 5 5 1ಗುರು =30+1ಗುರು

| | | | | | | |
|---|---|---|---|---|---|---|
| – U UU | – U – | – U – | UUU – | – U – | UU U – | – |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಋನ ವನೋ | ದಿ |

ಛಂದಸ್ಸು – ವಾರ್ಧಕ ಷಟ್ಪದಿ

## ಸಂಭಾವ್ಯ ಕಂದ ಪದ್ಯಗಳು

1) 4 4 4 = 12

| – – | U – U | U U – |
|---|---|---|
| ಅಂತೆಂ | ಬನಾರ್ಗೆ | ಪಿರಿದುಂ |

4 4 4 4 4 = 12

| – – | – – | U – U | – – | U U – |
|---|---|---|---|---|
| ಭ್ರಾಂತುದ | ಲೇಂ ದ್ರೋ | ಣನೆಂಬ | ನೇಂ ಪಾ | ರ್ವನೆ ಪೇ |

**ಛಂದಸ್ಸು– ಕಂದ ಪದ್ಯ**

2)

| UUUU | U U – | UU – |
|---|---|---|
| ಅತಿಕುಟಿ | ಲ ಮನಂ | ಧನಲು |

| UU – | – – | U – U | U U – | U U – |
|---|---|---|---|---|
| ಬ್ಧತೆಯಿಂ | ದಂದು | ಷ್ಟಬುದ್ಧಿ | ನುಡಿದ ೦ | ಪುಸಿಯಂ |

3) 4 4 4 =12

| – U U | – U U | – U U |
|---|---|---|
| ಪುಟ್ಟಿದ | ನೂರ್ವರು | ಮೆನ್ನೊಡ |

4 4 4 4 4 =20

| – U U | – U U | U – U | – U U | – – |
|---|---|---|---|---|
| ಪುಟ್ಟಿದ | ನೂರ್ವರು | ಮಿದಿರ್ಚೆ | ಸತ್ತೊಡೆ | ಕೋಪಂ |

**ಛಂದಸ್ಸು– ಕಂದ ಪದ್ಯ**

## ಉತ್ಪಲಮಾಲಾ ವೃತ್ತ

1)

| ಭ | ರ | ನ | ಭ | ಭ | ರ | ಲಗ |
|---|---|---|---|---|---|---|
| – UU | – U – | U U U | – U U | – UU | – U – | U – |
| ಎನ್ನಣು | ಗಾಳನೆ | ನ್ನಣುಗ | ದಮ್ಮನ | ನಿಕ್ಕದ | ಪಾರ್ಥಭೀ | ಮರು |

ಳ್ಳನ್ನೆಮ್

**ಛಂದಸ್ಸು– ಉತ್ಪಲ ಮಾಲಾ ವೃತ್ತ**

2)

| ಭ | ರ | ನ | ಭ | ಭ | ರ | ಲಗ |
|---|---|---|---|---|---|---|
| – UU | – U – | UUU | – U U | – UU | – U – | U– |
| ಮೇದಿನಿ | ಯಂ ಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

**ಛಂದಸ್ಸು– ಉತ್ಪಲ ಮಾಲಾ ವೃತ್ತ**

ಚಂಪಕಮಾಲಾ ವೃತ್ತ

1)

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U – U | – U U | U – U | U – U | U – U | – U – |
| ಖಳನೊ | ಳವಿಂಗೆ | ಕುಪ್ಪೆ ವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ |

ಛಂದಸ್ಸು – ಚಂಪಕ ಮಾಲಾ ವೃತ್ತ

## 13. ವ್ಯಾಕರಣಾಂಶಗಳು

### 1.ವರ್ಣಮಾಲೆಗಳು-

1.ಒಟ್ಟು ವರ್ಣಮಾಲೆಗಳ ಸಂಖ್ಯೆ-49 2) ಒಟ್ಟು ಸ್ವರಗಳು-13 3) ಹೃಸ್ವ ಸ್ವರಗಳು-6 4) ದೀರ್ಘ ಸ್ವರಗಳು-07 5)ಅನುನಾಸಿಕಗಳು-05 6) ಅಲ್ಪ ಪ್ರಾಣಾಕ್ಷರಗಳು-10 7) ಮಹಾ ಪ್ರಾಣಾಕ್ಷರಗಳು-10 8) ವರ್ಗೀಯ ವ್ಯಂಜನ-25 9) ಅವರ್ಗೀಯ ವ್ಯಂಜನ-09 10) ಯೋಗವಾಹಗಳು-02

### 2.ನಾಮಪದಗಳು-

ರೂಢನಾಮ-ನದಿ,ದೇಶ,ಭೂಮಿ ಪರ್ವತ

ಅಂಕಿತನಾಮ- ಶಬರಿ,ರಾಮ,ಕರ್ಣ,ರಾಹಿಲ್,ಧರ್ಮರಾಯ

ಅನ್ವರ್ಥಕನಾಮ-ವ್ಯಾಪಾರಿ,ವಿದ್ವಾಂಸ,ಶಿಕ್ಷಕ,ಕುರುಡ,ಕಿವುಡ

ಗುಣವಾಚಕ-ಒಳ್ಳೆಯ,ಸಣ್ಣ,ಹಳತು,ಹೊಸತು

ಭಾವನಾಮ-ಕೆಂಪು,ಹಿರಿಮೆ,ನೋಟ,ಮಾಟ

ಸಂಖ್ಯಾವಾಚಕ- ಒಂದು,ಹತ್ತು,ಸಾವಿರ,ಮೂವತ್ತು

ಸಂಖ್ಯೇಯ ವಾಚಕ- ಹತ್ತನೇಯ,ನಾಲ್ವರು,ಇಬ್ಬರು,ಮೂವತ್ತೆರಡನೇಯ

ದಿಗ್ವಾಚಕ- ಪೂರ್ವ,ಪಶ್ಚಿಮ,ಉತ್ತರ,ದಕ್ಷಿಣ

### 3.ಸರ್ವನಾಮ

ಉತ್ತಮ ಪುರುಷ ಸರ್ವನಾಮ-ನಾನು ( ಏಕವಚನ) ನಾವು (ಬಹುವಚನ)

ಮದ್ಯಮಪುರುಷ–ನೀನು(ಏಕವಚನ) ನೀವು(ಬಹುವಚನ)

ಪ್ರಥಮ ಪುರುಷ-ಅವನು,ಅವಳು,ಅದು(ಏಕವಚನ) ಅವರು,ಅವು(ಬಹುವಚನ)

ಆತ್ಮಾರ್ಥಕ ಸರ್ವನಾಮ-ತಾನು,ತಾವು,ತಮ್ಮ

### 4.ವಿಭಕ್ತಿ ಪ್ರತ್ಯಯಗಳು( ವಿಭಕ್ತಿ ಪ್ರತ್ಯಯ-ಹೊಸಗನ್ನಡ-ಹಳೆಗನ್ನಡ-ಕಾರಕಾರ್ಥ)

ಪ್ರಥಮ ವಿಭಕ್ತಿ ಪ್ರತ್ಯಯ- ಉ-ಮ್-ಕತ್ರರ್ಥ

ದ್ವಿತಿಯಾ-ಅನ್ನು-ಅಂ-ಕರ್ಮಾರ್ಥ

ತೃತೀಯಾ-ಇಂದ-ಇಂದಂ-ಕರಣಾರ್ಥ

ಚತುರ್ಥಿ ವಿಭಕ್ತಿ ಪ್ರತ್ಯಯ-ಗೆ,ಕೆ,ಇಗೆ-ಗೆ,ಕೆ,ಕ್ಕೆ-ಸಂಪ್ರದಾನ

ಪಂಚಮಿ-ದೆಸೆಯಿಂದ-ಅತ್ತಣಿಂ-ಅಪಾದಾನ

ಷಷ್ಠೀ-ಅ-ಅ-ಸಂಬಂಧ

ಸಪ್ತಮಿ ವಿಭಕ್ತಿ ಪ್ರತ್ಯಯ-ಅಲ್ಲಿ-ಓಳ್-ಅಧಿಕರಣ

5.ಕ್ರಿಯಾಪದಗಳು-

ಕ್ರಿಯಾಪದದ ಮೂಲ ರೂಪ- ಧಾತು.

ವಿಧ್ಯರ್ಥಕ ರೂಪ-ನಡೆಯಲಿ,ಮಾಡಲಿ,ಕೇಳಲಿ,ನೋಡಲಿ

ಸಂಭಾವನಾರ್ಥಕ ರೂಪ-ನಡೆದಾನು,ಮಾಡಿಯಾನು,ಕೇಳಿಯಾನು

ನಿಷೇದಾರ್ಥಕ ರೂಪ-ನಡೆಯನು,ಮಾಡನು,ಕೇಳನು

6.ದ್ವಿರುಕ್ತಿಗಳು–ಬೇಗಬೇಗ, ಸಾಕುಸಾಕು, ತುತ್ತತುದಿ, ನಟ್ಟನಡುವೆ, ಮೆಲ್ಲಮೆಲ್ಲನೆ, ತಿರುಗಿತಿರುಗಿ, ದಿನದಿನ , ಬಯಲು ಬಯಲು, ಕಟ್ಟಕಡೆಗೆ,ತುದಿತುದಿ,ನಡೆನಡೆ,ಈಗೀಗ,ಸುಡು ಸುಡು,ಇರುಳು ಇರುಳು,ಬಣ್ಣ ಬಣ್ಣ,ಆಗಲಿ ಆಗಲಿ.

7. ಜೋಡುನುಡಿಗಳು--ಸತಿ-ಪತಿ, ಕೆನೆ-ಮೊಸರು, ಬಿಳಿಹೊಳೆ, ಕಾಫಿ-ಗೀಫಿ, ಹುಳ-ಹುಪ್ಪಡಿ, ಮನೆ-ಮಠ, ಶಾಲೆ ಗಿಲೆ

8.ಅನುಕರಣಾವ್ಯಗಳು–ಧಗಧಗ, ಕರಕರ,ಪಳಪಳ,ಚಟಚಟ, ಗುಜುಗುಜು,ಸರಸರ, ಭರಭರ,ಜುಳುಜುಳು,ಲಕಲಕ

9.ತತ್ಸಮ ತದ್ಭವಗಳು–ಗ್ರಹ-ಗರ, ವಸಂತ-ಬಸಂತ, ಕಾವ್ಯ-ಕಬ್ಬ, ವಂಶ-ಬಂಚ, ಕುಠಾರ-ಕೊಡಲಿ, ವ್ಯಾಪಾರಿ=ಬೇಹಾರಿ, ಸಾಮಂತ-ಸಾವಂತ, ಬ್ರಮ್ಹ-ಬೊಮ್ಮ, ರಾಜ-ರಾಯ. ಶುನಕ- ಸೊಣಗ, ಅಟವಿ-ಅಡವಿ, ಪುಣ್ಯ-ಹೂನ್ಯ

10.ಅನ್ಯದೇಶಿ ಪದಗಳು–ಗ್ರೀಕ್-ರೋಮನ್ ಪದಗಳು-ದಮ್ಮಡಿ,ದಿನಾರ,

ಪೋರ್ಚಗೀಸ್ ಪದಗಳು-ಮೇಜು,ಅನಾನಸು,ಸಾಬೂನು,ರಸೀದಿ

ಪರ್ಶಿಯನ್ ಪದಗಳು- ಅಬಕಾರಿ,ಚೌಕಾಸಿ,ಅಜಮಾಯಿಷಿ,ಆಮದು ದಲ್ಲಾಳಿ

ಅರಬ್ಬಿ ಪದಗಳು-ಅಮಾನತು,ಇನಾಮು, ಕಾಯ್ದೆ,ಚೊಂಬು

ಉರ್ದು ಪದಗಳು-ಕಿಮ್ಮತ್ತು,ಇಲಾಖೆ,ಅಹವಾಲು,ದಾಖಲೆ,ಜುಲ್ಮಾನೆ

ಹಿಂದುಸ್ಥಾನಿ ಪದಗಳು-ಅರ್ಜಿ,ಹುಕುಂ,ಅಹವಾಲು,ಸಲಾಮು

11.ಲೇಖನ ಚಿನ್ಹೆಗಳು–

| | | | |
|---|---|---|---|
| ಪ್ರಶ್ನಾರ್ಥಕ -? | ಪೂರ್ಣವಿರಾಮ . | ಅಲ್ಪವಿರಾಮ , | ವಿವರಣಾತ್ಮಕ ಚಿನ್ಹೆ :- |
| ಭಾವಸೂಚಕ ! | ಅರ್ಧವಿರಾಮ ; | ವಾಕ್ಯವೇಷ್ಟನ್ ‘ ‘ | ಉದ್ಧರಣ “ “ |

## 12.ವಾಕ್ಯ ಪ್ರಕಾರಗಳು

ಸರಳ ವಾಕ್ಯ-ಒಂದು ಪೂರ್ಣ ಕ್ರಿಯಾಪದದಿಂದ ಕೂಡಿದ ಸ್ವತಂತ್ರ ಅರ್ಥ ಕೊಡುವ ವಾಕ್ಯ ಇದಾಗಿದೆ.

ಉದಾ- ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.

ಸಂಯೋಜಿತ ವಾಕ್ಯ -ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯ ಇದಾಗಿದೆ.

ಉದಾ-ಮಕ್ಕಳು ಹಾಲನ್ನು ಕುಡಿಯುತ್ತಾರೆ ಆದರೆ ಕುಡಿಯಲು ಸಾಕಷ್ಟು ಹಾಲಿಲ್ಲ.

ಮಿಶ್ರವಾಕ್ಯ-ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿ ಪೂರ್ಣ ಅರ್ಥವನ್ನು ಕೊಡುವ ವಾಕ್ಯ ಇದಾಗಿದೆ.

ಉದಾ-ಈ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದರಿಂದ ನಮ್ಮ ರಾಜ್ಯಕ್ಕೆ ಒಳ್ಳೆಯ ಭವಿಷ್ಯವಿದೆ ಎಂದು ಮುಖ್ಯ ಮಂತ್ರಿಗಳು ತಮ್ಮ ಸಚಿವ ಸಂಪುಟದ ಸದಸ್ಯರಿಗೆ ತಿಳಿಸಿದರು.

**13.ಪದಗಳ ಅರ್ಥ** - ಕಸವರ-ಚಿನ್ನ, ಗಡಣ-ಸಮೂಹ, ಕುಟಿಲ-ಮೋಸ, ಎಲರ್-ಗಾಳಿ, ಕದಳಿ-ಬಾಳೆ, ತನುಜ-ಮಗ, ಸುಪರ್ದಿ-ವಶ, ತೃಷೆ-ಬಾಯಾರಿಕೆ, ಪನ್ನಗ- ಹಾವು, ಕಿಂಕರ- ಸೇವಕ, ಪೊಗಳು-ಹೊಗಳು, ಕಂಪು-ಸುವಾಸನೆ, ಸಿಂಪಿ-ದರ್ಜಿ, ವಿಲಾಯಿತಿ-ವಿದೇಶ, ಪಥ-ದಾರಿ

**14.ಹೊಸಗನ್ನಡ ರೂಪ**- ನೋಳ್ಪೆನು- ನೋಡುವೆನು, ಸೈರಿಸದೆ- ಸೈರಿಸಲಾರದೆ, ಅದರ್ಕೆ-ಅದಕ್ಕೆ, ಒಡಂಬಟ್ಟು-ಒಪ್ಪಿಕೊಂಡು, ಕಾವಲ್ಗೆ-ಕಾವಲಿಗೆಅಪ್ಪುದರಿಂ-ಆದುದರಿಂದ, ಇರ್ದೊಡೆ-ಇದ್ದರೆ, ನೋಳವಿಂಗೆ-ನೊಣಕ್ಕೆ, ಬರ್ಪುದು-ಬರುವುದು, ಪಸುರ್ಗೆ-ಹಸುರಿಗೆ,ಅನ್ನಗೆಂ-ಅಲ್ಲಿಯವರಿಗೆ

**15.ಗ್ರಾಂಥಿಕ ರೂಪ**—ಹೀಂಗ-ಹೀಗೆ, ಕಳುವ್ಯಾರೆ-ಕಳುಹಿಸಿದ್ದಾರೆ, ಇಲ್ಲದ್ಹಂಗ-ಇಲ್ಲದಹಾಗೆ, ಇಸವಾಸ-ವಿಶ್ವಾಸ, ಸಕ್ಕಾರಿ-ಸಕ್ಕರೆ. ಬ್ಯಾಸರ-ಬೇಸರ

## 16.ಸಮಾಸಗಳು( ಉದಾಹರಣೆಗಳು)

1.ತತ್ಪುರುಷ ಸಮಾಸ- ಬೆಟ್ಟದಾವರೆ, ತಲೆ ನೋವು, ಪೂದೋಟ, ಸ್ವಾಮಿದ್ರೋಹ, ಧನಹರಣ, ಪರಧನ, ದೈವಭಕ್ತ, ಕಾಲು ಬಳೆ

2.ಕರ್ಮಧಾರೆಯ ಸಮಾಸ- ಇಮ್ಮಾವು, ಹೊಸಗನ್ನಡ, ನಲ್ಲುದುರೆ, ಅತಿಕುಟಿಲ, ಪೆರ್ಮಗ, ಹೆಮ್ಮರ,ಮೆಲ್ಪಾತು,ಕಟ್ಟೇಕಾಂತ, ದಿವ್ಯ ಶರಾಳಿ

3.ದ್ವಿಗು ಸಮಾಸ - ಏಕಾಕ್ಷ, ಮುಕ್ಕಣ್ಣು, ನಾಕಾಳು, ಎಣ್ದೆಸೆ, ಷಟ್ಕೋನ್. ಮೂಗಾವುದು, ಸಪ್ತ ಸ್ವರಗಳು

4.ಅಂಶಿ ಸಮಾಸ -ಕಡೆಹಣ್ಣ, ಅಂಗೈ, ನಡುರಾತ್ರಿ, ಹಿಂದಲೆ, ಮುಂಗೈ,ನಟ್ಟಡವಿ,ಹಿಂಗಾಲು,ತುದಿಬೆರಳು,ಕೆಳದುಟಿ, ತುದಿಮೂಗು

5.ದ್ವಂದ್ವ ಸಮಾಸ - ಗಿರಿ ವನ ದುರ್ಗ, ಹನುಮ ಭೀಮ ರಾಯರು, ಲವ ಕುಶರು,ಕೆರೆ ಕಟ್ಟೆ ಬಾವಿ, ಭೀಮಾರ್ಜುನರು, ಸೂರ್ಯಚಂದ್ರರು

6.ಕ್ರಿಯಾ ಸಮಾಸ- ಮೈಮುಚ್ಚು, ಕೈಯಾನು, ಸೊಲ್ಗೇಳಿ, ಬಲವಂದು, ಸಾಕ್ಷಿ ಮಾಡಿ, ಕಂಗೆಡು, ಬಿಲ್ಗೊಂಡು, ಕಣ್ದೆರೆ, ಮೋಸಮಾಡು

7,ಬಹುವ್ರೀಹಿ ಸಮಾಸ- ದಿನಪಸುತ, ಹಣೆಗಣ್ಣ, ಮಹೀಪತಿ, ಮುರಾರಿ, ಚಕ್ರಪಾಣಿ,ರಾಜೀವಸಖ, ಗಾಂಡೀವಿ, ಪವನ ನಂದನ, ಘಟ ಸಂಭೂತ

8.ಗಮಕ ಸಮಾಸ- ಆ ಕಲ್ಲು, ಆ ಹುಡುಗ, ಈ ಹುಲಿ, ನೆಯ್ದ ವಸ್ತ್ರ, ಬೆಂದಡಿಗೆ

## 17.ಸಂಧಿ ಪದಗಳು (ಉದಾಹರಣೆ)

1.ಲೋಪ ಸಂಧಿ-ಊರೂರು, ಮಾತಂತು, ಸಂಪನ್ನರಾದ, ನಿಮ್ಮಡಗಳಲಿ, ತೆರೆದಿಕ್ಕುವ, ಪೊಳ್ದಡೆ, ತಿಂಗಳೂರಿನ, ಬಲ್ಲೆನೆಂದು, ಒಮ್ಮೊಮ್ಮೆ

2. ಆಗಮ ಸಂಧಿ- ಮರವನ್ನು, ಕೈಯಿಂದ, ಮಗುವಿಗೆ, ಓಣಿಯಲ್ಲಿ, ಶಾಲೆಯಲ್ಲಿ, ಜಾಗವನ್ನು, ಮಳೆಯಿಂದ, ಭೇಧವಿಲ್ಲ, ಮರವನ್ನು

3.ಆದೇಶ ಸಂಧಿ - ಮಳೆಗಾಲ, ಮೈದೋರು, ಬೆಂಬತ್ತು, ಕಂಗೆಟ್ಟು, ಕಂಬನಿ, ಹೊಸಗನ್ನಡ, ಕಂಬನಿ, ಇಂಚರ, ಹೊಸಗಾಲ, ಧೃತಿಗೆಟ್ಟು

1. ಸವರ್ಣ ದೀರ್ಘ ಸಂಧಿ- ಮಹಾತ್ಮ, ಗಿರೀಶ, ಸುರಾಸುರ, ವಧೂಪೇತ, ಸಂಗ್ರಹಾಲಯ, ವಾಚನಾಲಯ, ನಿಜಾ ಶ್ರಮ, ದ್ರವ್ಯಾರ್ಥಿ

2.ಗುಣ ಸಂಧಿ- ಮಹರ್ಷಿ, ಮಹೇಶ್ವರ, ಸೂರ್ಯೋದಯ, ಮಂಡಳೇಶ್ವರ, ಮದೋನ್ಮತ, ದೇವೇಂದ್ರ, ಚಂದ್ರೋದಯ

3.ವೃದ್ಧಿ ಸಂಧಿ - ಏಕೈಕ, ಜನೈಕ್ಯ, ವನೌಷದಿ, 4. ಯಣ್ ಸಂಧಿ -ಆತ್ಯಾದರ, ಅತ್ಯವಸರ, ಜಾತ್ಯಾತೀತ, ಕೋಟ್ಯಾನುಕೋಟಿ

5. ಜಶ್ತ್ವ ಸಂಧಿ - ವಾಗ್ದೇವಿ, ಷಡಾನನ, ಅಜಂತ, ದಿಗಂತ, ಅಬ್ದಿ 6. ಶ್ಚುತ್ವ ಸಂಧಿ - ಪಯಶ್ಶಯನ, ಶರಚ್ಚಂದ್ರ, ಬೃಹಚ್ಛತ್ರ

7.ಅನುನಾಸಿಕ ಸಂಧಿ - ಸನ್ಮಾನ, ಉನ್ಮಾದ, ತನ್ಮಯ , ಷಣ್ಮುಖ

# ಧನ್ಯವಾದಗಳು